ಸಂಪುಟ: 01 ಸಂಚಿಕೆ: 06 ಪುಟ: 04 ಬೆಲೆ: 02 ಬುಧವಾರ ಜೂನ್ 10 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಸತ್ಯದ ಧ್ವನಿ... ಜನರ ನುಡಿ....

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:06 Pages:04 Price:02 WEDNESDAY JUNE 10 2026 RNI NO: KNKAN/26/A4008 E-mail:ajathashathru2026@gmail.com

## ಸೂರಜ್ ಹೆಗ್ಡೆ ಅಂತಿಮ ದರ್ಶನ ಪಡೆದ ರಾಹುಲ್

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ನಿನ್ನೆ ನಿಧನರಾದ ಎಐಸಿಸಿ ಕಾರ್ಯದರ್ಶಿ ಸೂರಜ್ ಹೆಗ್ಡೆಯವರ ನಿವಾಸಕ್ಕೆ ಇಂದು ಭೇಟಿ ನೀಡಿದ ಲೋಕಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಅವರು ಸೂರಜ್ ಹೆಗ್ಡೆಯವರ ಪಾರ್ಥೀವ ಶರೀರಕ್ಕೆ ಅಂತಿನ ನಮನ ಸಲ್ಲಿಸಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಿದರು.**



ನವದೆಹಲಿಯಿಂದ ಇಂದು ಬೆಳಿಗ್ಗೆ ಬೆಂಗಳೂರಿಗೆ ಆಗಮಿಸಿದ ರಾಹುಲ್‌ಗಾಂಧಿಯವರು ವಿಮಾನ ನಿಲ್ದಾಣದಿಂದ ನೇರವಾಗಿ ಬಿಇಎಲ್ ರಸ್ತೆಯಲ್ಲಿರುವ ಸೂರಜ್ ಹೆಗ್ಡೆಯವರ ನಿವಾಸಕ್ಕೆ ತೆರಳಿ ಅವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದು ನಮನ ಸಲ್ಲಿಸಿದರು. ಬಳಿಕ ಅವರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು. ಇದಕ್ಕೂ ಮೊದಲು ನವದೆಹಲಿಯಿಂದ ಬೆಂಗಳೂರಿಗೆ ಬಂದಿಳಿದ ರಾಹುಲ್‌ಗಾಂಧಿಯವರನ್ನು ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಇವರುಗಳು ಬರ ಮಾಡಿಕೊಂಡರು. ಎಐಸಿಸಿ ಕಾರ್ಯದರ್ಶಿ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾಗಿದ್ದ ಸೂರಜ್ ಹೆಗ್ಡೆಯವರು ನಿನ್ನೆ ಹೃದಯಾಘಾತದಿಂದ ನಿಧನರಾಗಿದ್ದರು. ಅವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಹೆಬ್ಬಾಳ ಚಿತಾಗಾರದಲ್ಲಿ ನಡೆದ ಅಂತ್ಯಕ್ರಿಯೆಯಲ್ಲಿ ರಾಹುಲ್‌ಗಾಂಧಿ ಭಾಗವಹಿಸಿದ್ದರು.

## ದೇವೇಗೌಡರು ಸ್ಪರ್ಧೆಗೆ ಅವಕಾಶ ಕೇಳಿರಲಿಲ್ಲ

# ಕುಮಾರಸ್ವಾಮಿ ಸ್ಪಷ್ಟನೆ

**ಬೆಂಗಳೂರು: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ರಾಜ್ಯಸಭೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಡುವಂತೆ ಕೇಳಿರಲಿಲ್ಲ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದರು.ಜಿಲ್ಲೆಯ ತಗ್ಗಹಳ್ಳಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರ ಬಗ್ಗೆ ಕಾಂಗ್ರೆಸ್‌ನವರಿಗೆ ಈಗ ಅನುಕಂಪ ಬಂದಿದೆ ಎಂದು ವ್ಯಂಗ್ಯವಾಡಿದರು.**

ದೇವೇಗೌಡರು ಹೋರಾಟದ ಬದುಕನ್ನು ನಡೆಸಿಕೊಂಡು ಬಂದಿದ್ದು, ಅಧಿಕಾರಕ್ಕಾಗಿ ಯಾರ ಮನೆಬಾಗಿಲಿಗೂ ಹೋಗಿಲ್ಲ, ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟುಬಂದರು ಎಂದು ಹೇಳಿದರು. ಕಾಂಗ್ರೆಸ್‌ನವರು ಬಿಜೆಪಿ, ಜೆಡಿಎಸ್ ಮೈತ್ರಿಯಲ್ಲಿ ಬಿರುಕು ತರುವ ಪ್ರಯತ್ನ ಮಾಡುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಅವರು ಮೇಲಿನಂತೆ ಪ್ರತಿಕ್ರಿಯಿಸಿದರು.2020 ರಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ ದೇವೇಗೌಡರ ವಿರುದ್ಧ ಮತ್ತೊಬ್ಬ ಅಭ್ಯರ್ಥಿ ಸ್ಪರ್ಧಿಸುವ ಅವಕಾಶವಿರಲಿಲ್ಲ. ಹಾಗಾಗಿ ಕಾಂಗ್ರೆಸ್ ಬೆಂಬಲದೊಂದಿಗೆ ಅವಿರೋಧ ಆಯ್ಕೆಯಾಗಿತ್ತು ಎಂದು ಹೇಳಿದರು.

ಮಾಜಿ ಸಚಿವ ಚಲುವರಾಯಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, ನೂತನ ಮುಖ್ಯಮಂತ್ರಿ ಏನು ಮಾಡುತ್ತಾರೆ ಎಂಬುದನ್ನು ಎರಡು ತಿಂಗಳು ಕಾದುನೋಡೋಣ. ಮುಖ್ಯಮಂತ್ರಿಗೆ ನಾನೇನು ಸಲಹೆ ನೀಡಲಿ ಎಂದ ಅವರು, ಕುಮಾರಸ್ವಾಮಿಯವರು 2 ಬಾರಿ ಮುಖ್ಯಮಂತ್ರಿಯಾಗಿ ಏನು ಸಾಧನೆ ಮಾಡಿದ್ದಾರೆ ಎಂದು ಈಗಿನ ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ. ಎಲ್ಲದಕ್ಕೂ ಸಾಕ್ಷಿಗುಡ್ಡೆ ಕೇಳುವ ಅವರಿಗೆ ನನ್ನಿಂದ ಏನು ಸಲಹೆ ನಿರೀಕ್ಷೆ ಮಾಡುತ್ತಾರೆ ಎಂದು ಪ್ರಶ್ನಿಸಿದರು. ನಾನು ಮತ್ತೆ



ಮುಖ್ಯಮಂತ್ರಿಯಾಗುವುದಕ್ಕಿಂತ ಹೆಚ್ಚಾಗಿ ನಾಡಿನ ಜನರ ರಕ್ಷಣೆ ಮಾಡಬೇಕಿದೆ. ಆ ಶಕ್ತಿ ಮೈತ್ರಿಪಕ್ಷಗಳಿಗೆ ತರುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದರು. ಮೇಲನೆ ಚುನಾವಣೆ ;ಗೇಮ್‌ಪ್ಲ್ಯಾನ್ ಇಲ್ಲ: ವಿಧಾನಸಭೆಯಿಂದ ವಿಧಾನಪರಿಷತ್‌ನ 7 ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಜೆಡಿಎಸ್‌ನಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ. ನಮಗೂ 2 ಮತಗಳ ಕೊರತೆಯಿದೆ.

ಕಾಂಗ್ರೆಸ್‌ನ 5ನೇ ಅಭ್ಯರ್ಥಿಗೂ 2 ಮತಗಳ ಕೊರತೆಯಿದೆ. ಈ ಚುನಾವಣೆಯಲ್ಲಿ ಯಾವುದೇ ಗೇಮ್ ಪ್ಲ್ಯಾನ್ ಇಲ್ಲ ಎಂದು ಸ್ಪಷ್ಟಪಡಿಸಿದರು. ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಬಸನಗೌಡ ಪಾಟೀಲ್ ಯತ್ನಾಳ್ ಅವರ ಮತವನ್ನು ಕೇಳುತ್ತೇವೆ. ಕಾಂಗ್ರೆಸ್‌ನವರಿಗೆ ಹಣಬಲವಿದೆ. ಮುಂದೇನಾಗುತ್ತದೋ ಕಾದು ನೋಡೋಣ ಎಂದರು. ಎಲ್ಲಾ ದೇಶಗಳಲ್ಲೂ ಏರಿಕೆ: ಮಧ್ಯಪ್ರಾಚ್ಯದಲ್ಲಿನ ಯುದ್ಧದ ಬಿಕ್ಕಟ್ಟಿನಿಂದಾಗಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ದರ ಏರಿಕೆಯಾಗಿದೆ. ಇದು ಕೇವಲ ಭಾರತದಲ್ಲಿ ಮಾತ್ರ ಆಗಿಲ್ಲ. ವಿಶ್ವದ ಎಲ್ಲಾ ದೇಶಗಳಲ್ಲೂ ಇಂಥ ಪರಿಸ್ಥಿತಿ ಎದುರಾಗಿದೆ.

ಕಾಂಗ್ರೆಸ್‌ನವರು ಎಲ್ಲವುಗಳ ಬೆಲೆಗಳನ್ನು ಹೆಚ್ಚಿಸಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಿದ್ದರೆ ಏನು ಮಾಡುತ್ತಿದ್ದರು ಎಂದು ಕಾಂಗ್ರೆಸ್‌ನವರನ್ನೇ ಪ್ರಶ್ನಿಸಿದರು. ಮಂಡ್ಯ ಜಿಲ್ಲೆಯ ರಸ್ತೆಗಳ ಅಭಿವೃದ್ಧಿಗೆ 54 ಕೋಟಿ ರೂ. ಅನುದಾನ ದೊರೆತಿದೆ. ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಲಾಗುವುದು ಎಂದರು.

## ಕಳೆದ 10 ದಿನಗಳ ಬಳಿಕ ಚಿನ್ನದ ದರ ಏರಿಕೆ, ಬೆಳ್ಳಿ ಬೆಲೆ ಸ್ಥಿರ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕಳೆದ ಹತ್ತು ದಿನಗಳಿಂದ ಇಳಿಮುಖವಾಗಿದ್ದ ಚಿನ್ನದ ದರ ಇಂದು ಏರಿಕೆಯಾಗಿದ್ದರೆ, ಬೆಳ್ಳಿ ದರ ಸ್ಥಿರವಾಗಿದೆ.ನಿನ್ನೆ ಕೂಡಾ ಚಿನ್ನ ಮತ್ತು ಬೆಳ್ಳಿ ದರಗಳಲ್ಲಿ ಇಳಿಕೆಯಾಗಿತ್ತು. ಇಂದು ಚಿನ್ನದ ದರ ಏರಿಕೆಯಾಗಿದ್ದರೆ ಬೆಳ್ಳಿ ದರದಲ್ಲಿ ಯಥಾಸ್ಥಿತಿ ಮುಂದುವರೆದಿದೆ.**




ಲಭ್ಯವಿರುವ ಮಾರುಕಟ್ಟೆ ಮಾಹಿತಿ ಪ್ರಕಾರ, ಇಂದು ಬೆಳಿಗ್ಗೆ 24 ಕ್ಯಾರೆಟ್‌ನ ಚಿನ್ನ 1 ಗ್ರಾಂಗೆ 147 ರೂ. ಹೆಚ್ಚಳವಾಗಿದ್ದು, 15,316 ರೂ.ನಷ್ಟಿದೆ. 22 ಕ್ಯಾರೆಟ್‌ನ ಚಿನ್ನವು ಒಂದು ಗ್ರಾಂಗೆ 135 ರೂ. ಹೆಚ್ಚಳವಾಗಿದ್ದು, 14,040 ರೂ.ನಷ್ಟಿದೆ. ನಿನ್ನೆ ಕ್ರಮವಾಗಿ 24 ಕ್ಯಾರೆಟ್ ಚಿನ್ನ 104 ರೂ. 22 ಕ್ಯಾರೆಟ್ ಚಿನ್ನ 95 ರೂ.ನಷ್ಟು ಇಳಿಕೆಯಾಗಿ–ತ್ತು. ಇಂದು 18 ಕ್ಯಾರೆಟ್ ಚಿನ್ನ ಒಂದು ಗ್ರಾಂಗೆ 110 ರೂ.ಗೆ ಹೆಚ್ಚಳವಾಗಿದ್ದು, 11,487 ರೂ.ಗೆ ತಲುಪಿದೆ. ಕಳೆದ ಹತ್ತನ್ನೆರಡು ದಿನಗಳಿಂದ ಇಳಿಮುಖವಾಗಿದ್ದ ಬೆಳ್ಳಿಯ ದರ ನಿನ್ನೆ ಸಹ ಒಂದು ಕೆಜಿಗೆ 5 ಸಾವಿರ ರೂ.ಗಳಷ್ಟು ಕಡಿಮೆಯಾಗಿ 2,60,000 ರೂ.ಗೆ ತಲುಪಿತ್ತು. ಇಂದು ಯಾವುದೇ ಏರಿಳಿತವಿಲ್ಲದೆ ಅದೇ ದರ ಮಾರುಕಟ್ಟೆಯಲ್ಲಿ ಸ್ಥಿರವಾಗಿದೆ. ಜಾಗತಿ–ಕವಾಗಿ ಉಂಟಾಗುವ ಬದಲಾವಣೆಗಳ ಪರಿಣಾಮ ಚಿನಿವಾರಪೇಟೆಯ ಮೇಲೂ ಆಗಲಿದ್ದು, ಚಿನ್ನ ಮತ್ತು ಬೆಳ್ಳಿ ದರಗಳಲ್ಲಿ ಆಗಾಗ್ಗೆ ಏರಿಳಿತವಾಗುವುದು ಸಹಜ ಎಂಬುದು ವರ್ತಕರ ಅಭಿಪ್ರಾಯವಾಗಿದೆ.






## ಶಾಸಕ ಶಿವರಾಜ್ ತಂಗಡಗಿ ನಡೆಯಿಂದ ರೈತರಿಗೆ ನೋವಾಗಿದೆ. ನಾವು ಯಾರೂ ಹೈ ಡ್ರಾಮಾ ಮಾಡಿಲ್ಲ

ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ಕನಕಗಿರಿಯ ಶಾಸಕ ಶಿವರಾಜ್ ತಂಗಡಗಿ ಅವರು ಪ್ರಶ್ನೆ ಮಾಡಿದ ರೈತನನ್ನು ತಳ್ಳಿ ಇರುವುದನ್ನು ರೈತ ಸಂಘ ತೀವ್ರವಾಗಿ ಖಂಡಿಸಿದೆ. ಎಪಿಎಂಸಿಯಲ್ಲಿರುವ ರೈತರ ಸಮುದಾಯ ಭವನದಲ್ಲಿ ಸುದ್ದಿಗೋಷ್ಠಿಯನ್ನು ಕರೆದ ರೈತರು ಶಾಸಕರ ನಡೆಯನ್ನು ಪ್ರಶ್ನಿಸಿದ್ದಾರೆ. ರೈತ ಮುಖಂಡ ಹನುಮಂತಪ್ಪ ಉಳೆನೂರು ಅವರು ಮಾತನಾಡಿ ರೈತ ನಾರಾಯಣಪ್ಪ ಈಡಿಗೇರ ಇವರು ಶಾಸಕರು ಎದುರು ಕೃಷಿ ಅಧಿಕಾರಿಗಳಿಗೆ ಧಿಕ್ಕಾರವನ್ನು ಕೂಗಿರುತ್ತಾರೆ. ರೈತರಿಗೆ ಆಹ್ವಾನ ನೀಡಿರುವುದನ್ನು ಪ್ರಶ್ನಿಸಿದ್ದಾರೆ.**

ಶಾಸಕರು ಸ್ಥಳದಲ್ಲಿಯೇ ಇರುವ ಕೃಷಿ ಅಧಿಕಾರಿಗಳನ್ನು ಕರೆದು ಉತ್ತರ ನೀಡಬಹುದಿತ್ತು. ಆದರೆ ಅದನ್ನು ನೀನ್ಯಾರೂ ಕೇಳೋಕೆ ರೈತರನ್ನು ಆಹ್ವಾನ ಮಾಡಬೇಕೆಂದು ನಿಯಮ ಇಲ್ಲ ಎಂದು ತಳ್ಳಿರುವುದು ಖಂಡನೀಯ ಎಂದು ಆಗ್ರಹ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ರೈತ ಬಣದ ಮುಖಂಡರುಗಳಾದ ಹನುಮಂತಪ್ಪ ಉಳೆನೂರು. ನಾರಾಯಣ ಈಡಿಗೇರ್. ಚಿನ್ನ ಹನುಮಂತರೆಡ್ಡಿ.ಸಣ್ಣ ರಾಮಣ್ಣ. ಅಯ್ಯಪ್ಪ ಸುದ್ದಿ. ಬಸಪ್ಪ ಗೊಂಡೆ ಕಾರ್. ಭಾಷಾ ಸಾಬ್ ಬಂಡಿ. ನಾಗಭೂಷಣ ಸಜ್ಜನ್. ರಂಗಪ್ಪ ನಾಯಕ್. ರಮೇಶ್ ಬಾಗೋಡಿ. ಸಿದ್ದರಾಮಪ್ಪ ಚಳ್ಳೂರು. ಕೃಷ್ಣಪ್ಪ ಬಜಂತ್ರಿ. ವೀರೇಶ್ ಮಳ್ಳೂರು. ಮಕ್ಬಾಲ್ ಸಾಬ್. ಭೀಮಣ್ಣ ಗಂಗಾವತಿ. ಸೇರಿದಂತೆ ಇತರ ರೈತ ಮುಖಂಡರುಗಳು ಇದ್ದರು.






## ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ :2028 ಕೊಪ್ಪಳ ವಿಧಾನಸಭೆ ಚುನಾವಣೆಗೆ ಸ್ಪರ್ಧೆ?

ವಿಶೇಷ ವರದಿ...

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಎಲ್ಲರ ಪ್ರೀತಿಯ ಅಣ್ಣ ಶಂಭಣ್ಣ ಎಂದೇ ಕರೆಯುವ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಹಾಗೂ ರಾಜ್ಯ ಸರಕಾರಿ ನೌಕರ ಸಂಘದ ಮಾಜಿ ಉಪಾಧ್ಯಕ್ಷ ಹಾಗೂ ಮಾಜಿ ಜಿಲ್ಲಾಧ್ಯಕ್ಷ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ ಈ ಬಾರಿ 2028ರ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವುದು ಬಹುತೇಕ ಖಚಿತ ಎಂಬ ಮಾಹಿತಿಗಳು ಅವರ ಆಪ್ತ ವಲಯದಿಂದ ಕೇಳಿ ಬರುತ್ತಿವೆ.**

ಶಿಕ್ಷಕರಾಗಿ ಅನೇಕ ವರ್ಷಗಳ ಸೇವೆ ಮಾಡಿರುವ ಶಿಕ್ಷಕ ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ ಈಗ ನಿವೃತ್ತಿಯಾಗಿದ್ದಾರೆ. ಅವರು ನಿವೃತ್ತಿಯಾಗುತ್ತಿದ್ದಂತೆ ಬಿಜೆಪಿ ಕಾಂಗ್ರೆಸ್ ಜೆಡಿ–ಎಸ್ ಪಕ್ಷಗಳು ಅವರನ್ನು ತಮ್ಮ ಪಕ್ಷಕ್ಕೆ ಕರೆತರಲು ತೆರೆಯ ಮರೆಯಲ್ಲಿ ಜೋರಾಗಿ ಕಸರತ್ತು ನಡೆಸಿದ್ದಾರೆ, ಅಲ್ಲದೆ ಶಂಭಣ್ಣ ಅವರಿಗೆ ಮೂರು ಪಕ್ಷದಲ್ಲಿ ಒಳ್ಳೆ ಬೆಂಬಲವಿದ್ದು ರಾಜ್ಯಮಟ್ಟದ ನಾಯಕರ ವಿಶ್ವಾಸವನ್ನು ಸಹ ಅವರು ಗಳಿಸಿದ್ದಾರೆ. ನಿವೃತ್ತಿಯ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಸೇರಿದ್ದ ಶಿಕ್ಷಕರು ನೌಕರರು, ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ ಅಭಿಮಾನಿಗಳು, ಸಾರ್ವಜನಿಕರ ಸಮ್ಮುಖದಲ್ಲಿಯೇ ಅಭಿನಂದನಾ ಸಮಾರಂಭದಲ್ಲಿ ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ ಅವರು ಮಾತನಾಡಿ ಬಿಜೆಪಿ ಪಕ್ಷಕ್ಕೆ ಬಹಿರಂಗ ಆಹ್ವಾನ ನೀಡಿದರು, ಹಾಗೆಯೇ ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ ಅವರು ಸಹ ವೇದಿಕೆಯಲ್ಲಿ ಖುದ್ದು ಆಹ್ವಾನ ಮಾಡಿರುವುದು ಗುಟ್ಟಾಗಿ ಉಳಿದಿಲ್ಲ.



ಶಂಭುಲಿಂಗನಗೌಡ ಹಲಿಗೇರಿ ಅವರು ಯಾರ ಆಹ್ವಾನವನ್ನೂ ತಿರಸ್ಕಾರ ಮಾಡಿಲ್ಲ. ಈಗಲೇ ನಾನು ಏನನ್ನೂ ಹೇಳುವುದಿಲ್ಲ, ಎಲ್ಲವನ್ನು ನಾನು ಚರ್ಚಿಸಿ, ಶೀಘ್ರ ನಿಲುವು ಪ್ರಕಟಿಸುವುದಾಗಿ ವೇದಿಕೆಯಲ್ಲಿ ತಮ್ಮ ಭಾಷಣದಲ್ಲಿ ಹೇಳುವ ಮೂಲಕ ನಿವೃತ್ತಿಯ ಆನಂತರ ರಾಜ–ಕೀಯ ಪ್ರವೇಶ ಮಾಡುವ ಸುಳಿವು ನೀಡಿದ್ದಾರೆ. ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ ಎಲ್ಲಾ ಸಮುದಾಯಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿ ವಿಶ್ವಾಸ ಗಳಿಸಿದ್ದಾರೆ, ಎಲ್ಲಾ ಸಮುದಾಯಗಳು ಈ ಬಾರಿ 2028ರ ಕೊಪ್ಪಳ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲು ಒತ್ತಡಗಳು ಏರುತ್ತಿದ್ದು, ವಿಧಾನಸಭಾ ಚುನಾವಣೆಗೆ ಶಂಭುಲಿಂಗನಗೌಡ ಹಲಿಗೇರಿ ಅವರು ಸ್ಪರ್ಧಿಸುವ ಬಗ್ಗೆ ಸಾಕಷ್ಟು ಚರ್ಚೆಗಳನ್ನು ನಡೆಸಿದ್ದಾರೆ.

ತಮ್ಮ ವೃತ್ತಿ ಜೀವನದುದ್ದಕ್ಕೂ ಸರ್ಕಾರಿ ನೌಕರರ ಸಂಘ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಲ್ಲಿಯೇ ಸೇವೆ ಮಾಡಿದ್ದಾರೆ. ಸಂಘವನ್ನು ಕಟ್ಟಿ ಬೆಳೆಸಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷರಿಂದ ಹಿಡಿದು ಜಿಲ್ಲಾಧ್ಯಕ್ಷರಾಗಿ, ರಾಜ್ಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಅವರು ರಾಜಕೀಯ ಪ್ರವೇಶ ಮಾಡಲು ನಿರ್ಧ–ರಿಸಿಯಾಗಿತ್ತು. ಅದಕ್ಕಾಗಿ ಅವರು ತಮ್ಮ ಶಿಕ್ಷಕರ ಹುದ್ದೆಗೆ ರಾಜೀನಾಮೆ ನೀಡಿ, ಜಿಪಂ ಕ್ಷೇತ್ರದಿಂದ ಅಖಾಡಕ್ಕೆ ಇಳಿಯಲು ಮುಂದಾಗಿದ್ದರು, ಕೊನೆಯ ಗಳಿಗೆಯಲ್ಲಿ ಹಿಂದೆ ಸರಿದರು ಅಂದು ಅವಕಾಶ ಸಿಕ್ಕಿದ್ದರೆ ಮುಂದೆ ಕೊಪ್ಪಳ ವಿಧಾನಸಭಾ ಕ್ಷೇತ್ರಕ್ಕೂ ಸ್ಪರ್ಧೆ ಮಾಡುವ ತಯಾರಿಯಲ್ಲಿದ್ದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಎರಡು ಅವಧಿಗೆ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಹಾಗೂ ಯಾವುದೇ ಭ್ರಷ್ಟಚಾರ ಇಲ್ಲದೇ ಉತ್ತಮ ಆಡಳಿತ ನೀಡಿದ ಕೀರ್ತಿ ಅವ–ರಿಗೆ ಸಲ್ಲುತ್ತದೆ ಒಳ್ಳೆಯ ಸೇವೆ ಸಲ್ಲಿದ್ದಾರೆ.

ಹಾಗೂ ಹಲವಾರು ಅಭಿವೃದ್ಧಿ ಕಾಯ9ಗಳನ್ನು ಮಾಡಿದ್ದಾರೆ ಹೀಗಾಗಿ, ಜಿಲ್ಲೆಯ ಸರ್ಕಾರಿ ನೌಕರರು ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ವಲಯದಲ್ಲಿ ಶಂಭಣ್ಣ ಅವರು ದೊಡ್ಡ ಹೆಸರು ಇದೆ, ಶಂಭುಲಿಂಗನಗೌಡರು ಶಿಕ್ಷಕ ವೃತ್ತಿಯಿಂದ ಈಗ ನಿವೃತ್ತರಾದರೂ ತಮ್ಮ ಜೊತೆಯಲ್ಲಿ ದೊಡ್ಡ ಪಡೆಯನ್ನೇ ಹೊಂದಿದ್ದಾರೆ. ಈ ಕಾರಣಕ್ಕಾಗಿಯೇ ಅವರನ್ನು ಬಿಜೆಪಿ ಕಾಂಗ್ರೆಸ್ ಜೆಡಿಎಸ್ ತಮ್ಮ ಪಕ್ಷಕ್ಕೆ ಸೆಳೆಯಲು ಮೂರು ಪಕ್ಷಗಳೂ ಒಳಗೊಳಗೆ ಪ್ರಯತ್ನಿಸುತ್ತಿವೆ.

ಜಿಪಂ ಚುನಾವಣೆಯ ಮೂಲಕ ರಾಜ–ಕೀಯ ಪ್ರವೇಶಕ್ಕೆ ಶಂಭಣ್ಣ ಮುಂದಾಗಿದ್ದರು, ಶಿಕ್ಷಕ ವೃತ್ತಿಯಲ್ಲಿ ಇದ್ದುದ್ದರಿಂದ ಅವರನ್ನು ರಾಜಕೀಯಕ್ಕೆ ತರಲು ಅವರ ಆಪ್ತರು ಮನಸ್ಸು ಮಾಡಲಿಲ್ಲ.

ಹೀಗಾಗಿ ಅಂದು ರಾಜಕೀಯ ಪ್ರವೇಶದಿಂದ ಶಂಭುಲಿಂಗನಗೌಡ ದೂರ ಉಳಿಯಬೇಕಾಯಿತು ಈ ಮಧ್ಯೆ ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಯಾರಿಗೆ ಎಂದಾಗಲೂ ಶಂಭುಲಿಂಗನಗೌಡ ಹಲಿಗೇರಿ ಅವರ ಹೆಸರು ಮುಂಚೂಣಿಗೆ ಬಂದಿತ್ತು. ಅದು ಸಹ ಕೈಗೂಡಲಿಲ್ಲ. ಆದರೆ, ಈಗ ನಿವೃತ್ತಿಯಾಗಿರುವುದರಿಂದ ಶಂಭುಲಿಂಗನಗೌಡ ಹಲಿಗೇರಿ ಅವರ ಶಕ್ತಿಯನ್ನು ಬಳಕೆ ಮಾಡಿಕೊಳ್ಳಲು ರಾಜಕೀಯ ಪಕ್ಷಗಳು ಹವಣಿಸುತ್ತಿವೆ. ಆದ–'ರೆ, ಶಂಭುಲಿಂಗನಗೌಡ ಹಲಿಗೇರಿ ಅವರು ಯಾವ ಪಕ್ಷದತ್ತ ಮುಖ ಮಾಡುತ್ತಾರೆ, ಒಟ್ಟಾರೆ 20028ರ ವಿಧಾನಸಭಾ ಚುನಾವಣೆಗೆ ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ ಅವರು ಸ್ಪರ್ಧಿಸುವುದು ಬಹುತೇಕ ಖಚಿತ ಎಂದು ಅವರ ಆಪ್ತ ವಲಯಗಳು ಹೇಳುತ್ತೇವೆ, ಆದ–'ರೆ ಶಂಭುಲಿಂಗನಗೌಡ ಪಾಟೀಲ್ ಹಲಿಗೇರಿ ಅವರು 2028 ವಿಧಾನಸಭೆ ಚುನಾವಣೆಗೆ ಸ್ಪರ್ಧೆ ಮಾಡಲು ಎಲ್ಲಾ ತಯಾರಿಗಳು ಅವರ ಆಪ್ತ ವಲಯಗಳಿಂದ ಸಿದ್ಧತೆ ನಡೆದಿದೆ,ಯಾವ ಪಕ್ಷದಿಂದ ಸ್ಪರ್ಧಿಸುತ್ತಾರೆ ಎಂಬುದು ಮಾತ್ರ ಕುತೂಹಲ ಮೂಡಿಸಿದೆ.

# ಸೋಮಶೇಖರ್ ಹೊದ್ಲೂರ್ ಔಷಧ ಅಂಗಡಿಯಲ್ಲಿ : ಅಸ್ತಮಾ ಇಂಗು ಗುಳಿಗೆ ಉಚಿತ ವಿತರಣೆ.

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ನಗರದ ಅಂಬೇಡ್ಕರ್ ವೃತ್ತದ ಹತ್ತಿರ ಇರುವ ಸೋಮಶೇಖರ್ ತಂದೆ ಯಮನಪ್ಪ ಹೊದ್ಲೂರು ಅವರ ಆಯುರ್ವೇದ ಔಷಧ ಅಂಗಡಿಯಲ್ಲಿ ಮೃಗಶಿರ ಮಳೆಯ ಸಮಯದಲ್ಲಿ ತೆಗೆದುಕೊಳ್ಳುವ ಹಿಂಗು ಗುಳಿಗೆ ಸೋಮವಾರ ಉಚಿತವಾಗಿ ವಿತರಣೆ ಮಾಡಿದರು.**

ಕಳೆದ 60ಕ್ಕೂ ಹೆಚ್ಚು ವರ್ಷಗಳಿಂದ ಉಚಿತವಾಗಿ ಗುಳಿಗೆ ವಿತರಣೆ ಮಾಡುತ್ತಾ ಬಂದಿರುವ ಸೋಮಶೇಖರ್ ಯಮನಪ್ಪ ಹೋದ್ಲೂರ್ ಆಯುರ್ವೇದ ಔಷಧ ಅಂಗಡಿಯಲ್ಲಿ ಪ್ರತಿ ವರ್ಷ ಉಚಿತವಾಗಿ ವಿಚಾರಿಸುತ್ತಾ ಬಂದಿದ್ದಾರೆ. ಮೃಗಶಿರಾ ನಕ್ಷತ್ರದ ಮಳೆಗಾಲದ ಆರಂಭ ಹಾಗೂ ಆ ಸಮಯದಲ್ಲಿ ಹಳೆ ಬೆಲ್ಲ ಮತ್ತು ಇಂಗು (ಹಿಂಗು) ಬಳಸಿ ಗುಳಿಗೆ ಮಾಡಿ ತಿನ್ನುವ ಸಂಪ್ರದಾಯದ ಹಿಂದೆ ಒಂದು ದೊಡ್ಡ ವೈಜ್ಞಾನಿಕ ಮತ್ತು ಆರೋಗ್ಯಕರ ಹಿನ್ನೆಲೆಯಿದೆ. ಇದರ ಕುರಿತಾದ ಸಂಪೂರ್ಣ ಮಾಹಿತಿ ಇಲ್ಲಿದೆ: ಮೃಗಶಿರ ಮಳೆ ಅಂದರೆ ಏನು ಸೂರ್ಯನು ಮೃಗಶಿರಾ ನಕ್ಷತ್ರಕ್ಕೆ ಪ್ರವೇಶಿಸಿದಾಗ *ಮೃಗಶಿರ ಕಾರ್ತೆ* ಅಥವಾ ಮೃಗಶಿರ ಮಳೆ ಆರಂಭವಾಗುತ್ತದೆ.

ಸಾಮಾನ್ಯವಾಗಿ ಇದು ಪ್ರತಿ ವರ್ಷ ಜೂನ್ ತಿಂಗಳ 7 ಅಥವಾ 8 ನೇ ತಾ-ರೀಖಿನ ಆಸುಪಾಸಿನಲ್ಲಿ ಆರಂಭವಾಗುತ್ತದೆ. ಭಾರತದಲ್ಲಿ ಮುಂಗಾರು (ಮಳೆಗಾಲ) ಅಧಿಕೃತವಾಗಿ ಕರಾವಳಿ ಮತ್ತು ಮಲೆನಾಡು ಭಾಗಕ್ಕೆ ಕಾಲಿಡುವುದು ಇದೇ ಸಮಯದಲ್ಲಿ. ರೈತರು ಈ ಮಳೆಯನ್ನು ನಂಬಿ ಭೂಮಿ ಹದಗೊಳಿಸಿ, ಬಿತ್ತನೆ ಕಾರ್ಯಕ್ಕೆ ಸಿದ್ಧತೆ ನಡೆಸುತ್ತಾರೆ. “ಮೃಗಶಿರ ಮಳೆ ಬಂದರೆ ಮೃಗಗಳೂ (ಪ್ರಾಣಿಗಳು) ಕೂಡ ತಣ್ಣಗಾಗುತ್ತವೆ” ಎಂಬ ನಾಣ್ಣುಡಿಯಿದೆ. ಅಂ-ದರೆ ಬೇಸಿಗೆಯ ಕಡು ಬೇಗೆಯಿಂದ ಕಾಯ್ದಿದ್ದ ಭೂಮಿಗೆ ಈ ಮಳೆ ತಂಪನ್ನು ಎರೆಯುತ್ತದೆ.




ಹಳೆಬೆಲ್ಲಮತ್ತು ಇಂಗಿನಗುಳಿಗೆಯ ಮಹತ್ವ ಮೃಗಶಿರ ಮಳೆ ಆರಂಭವಾಗುತ್ತಿದ್ದಂತೆ ಮಲೆನಾಡು ಮತ್ತು ಬಯಲುಸೀಮೆಯ ಗ್ರಾಮೀಣ ಭಾಗಗಳಲ್ಲಿ ಹಳೆ ಬೆಲ್ಲ, ಇಂಗನ್ನು ಸೇರಿಸಿ ಸಣ್ಣ ಗುಳಿಗೆಯನ್ನು (ಮಾತ್ರೆ) ಮಾಡಿ ಮನೆಯವರೆಲ್ಲರೂ ಖಾಲಿ ಹೊಟ್ಟೆಯಲ್ಲಿ ನುಂಗುವ ಅದ್ಭುತ ಸಂಪ್ರದಾಯವಿದೆ. ಈ ಗುಳಿಗೆಯನ್ನು ಏಕೆ ತಿನ್ನಬೇಕು ? (ಆರೋಗ್ಯದ ರಹಸ್ಯ)ರೋಗ ನಿರೋಧಕ ಶಕ್ತಿ ಹೆಚ್ಚಳ, ಬೇಸಿಗೆ ಮುಗಿದು ತಕ್ಷಣ ಮಳೆಗಾಲ ಆರಂಭವಾದಾಗ ಹವಾಮಾನದಲ್ಲಿ ಏಕಾಏಕಿ ಬದಲಾವಣೆಯಾಗುತ್ತದೆ. ವಾತಾವರಣ ತಂಪಾಗುವುದರಿಂದ ದೇಹದ ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಜ್ವರ, ನೆಗಡಿ, ಕೆಮ್ಮು, ಮತ್ತು ಕಫದ ಸಮಸ್ಯೆಗಳು ಕಾಡುತ್ತವೆ. ಇಂಗು ಮತ್ತು ಬೆಲ್ಲದ ಮಿಶ್ರಣವು ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಜೀರ್ಣಕ್ರಿಯೆ ಸುಧಾರಣೆ : ಮಳೆಗಾಲದಲ್ಲಿ ಜೀರ್ಣಶಕ್ತಿ (ಅಗ್ನಿ) ಮಂದವಾಗುತ್ತದೆ. ಇಂಗು ಮತ್ತು ಜೀರಿಗೆಯು ಹೊಟ್ಟೆಯ ಉಬ್ಬರ, ಗ್ಯಾಸ್ಟ್ರಿಕ್, ಮತ್ತು ಅಜೀರ್ಣದ ಸಮಸ್ಯೆಗಳನ್ನು ದೂರವಿಡುತ್ತವೆ.ದೇಹದ ಉಷ್ಣತೆ ಸಮತೋಲನ, ಇಂಗು ಮತ್ತು ಹಳೇ ಬೆಲ್ಲ ದೇಹಕ್ಕೆ ನೈಸರ್ಗಿಕವಾಗಿ ಉಷ್ಣತೆಯನ್ನು ನೀಡುತ್ತವೆ. ಮಳೆಗಾಲದ ತಂಪು ಹವಾಮಾನಕ್ಕೆ ದೇಹದ ತಾಪಮಾನವನ್ನು ಸಮತೋಲನದಲ್ಲಿಡಲು ಇದು ಸಹಾಯ ಮಾಡುತ್ತದೆ. ಕಫ ಮತ್ತು ವಾತ ದೋಷ ನಿವಾರಣೆ, ಆಯುರ್ವೇದದ ಪ್ರಕಾರ, ಹವಾಮಾನ ಬದಲಾಗುವ ಈ ಸಂಧಿಕಾಲದಲ್ಲಿ ದೇಹದಲ್ಲಿ ‘ವಾತ’ ಮತ್ತು ‘ಕಫ’ ದೋಷಗಳು ಹೆಚ್ಚಾಗುತ್ತವೆ. ಇಂಗು ಮತ್ತು ಹಳೇ ಬೆಲ್ಲ ಈ ಎರಡೂ ದೋಷಗಳನ್ನು ಶಾಂತಗೊಳಿಸುತ್ತವೆ. ಗುಳಿಗೆ ತಯಾರಿಸುವುದು ಹೇಗೆ ಬೇಕಾಗುವ ಸಾಮಗ್ರಿಗಳು: ಹಳೇ ಬೆಲ್ಲ (ಸ್ವಲ್ಪ)ಇಂಗು (ಹಿಂಗು) ಸೇರಿಸಿ ತಯಾರಿಸುವ ವಿಧಾನ. ಸ್ವಲ್ಪ ಹಳೇ ಬೆಲ್ಲವನ್ನು ತೆಗೆದುಕೊಂಡು ಅದಕ್ಕೆ ಚಿಟಿಕೆಯಷ್ಟು ಇಂಗು ಮತ್ತು ಜೀರಿಗೆಯನ್ನು ಸೇರಿಸಿ ಚೆನ್ನಾಗಿ ಕುಟ್ಟಿ, ಸಣ್ಣ ಕಡಲೆಕಾಳಿನ ಗಾತ್ರದ ಗುಳಿಗೆಗಳನ್ನು (ಉಂಡೆಗಳನ್ನು) ಮಾಡಿಕೊಳ್ಳಬೇಕು.

ಬಳಸುವ ವಿಧಾನ : ಮೃಗಶಿರ ಮಳೆ ಕೊಡುವ ಸಮಯದಲ್ಲಿ ಈ ಗುಳಿಗೆಯನ್ನು ನುಂಗಿ ಒಂದು ಲೋಟ ಉಗುರು ಬೆಚ್ಚಗಿನ ನೀರನ್ನು ಕುಡಿಯಬೇಕು. ಮನೆಯಲ್ಲಿರುವ ಸಣ್ಣ ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರೂ ಇದನ್ನು ತೆಗೆದುಕೊಳ್ಳಬಹುದು. ಮೃಗಶಿರ ಮಳೆ ಕೂಡುವ ಜೂನ್ 8.2026 ರಂದು ಸೋಮವಾರ ಸಂಜೆ 7 ಗಂಟೆ 6 ನಿಮಿಷಕ್ಕೆ ಗುಳಿಗೆ ತೆಗೆದುಕೊಳ್ಳಬೇಕು. ಆ ಸಮಯದ ಬಳಿಕ ಅಥವಾ ಮರುದಿನ ಬೆಳಿಗ್ಗೆ ಸಹ ತೆಗೆದುಕೊಳ್ಳಬಹುದು ಎಂದು ತಿಳಿಸಿದ ಸೋಮಶೇಖರ್ ಯಮನಪ್ಪ ಹೋದ್ಲೂರ್ ನಮ್ಮ ಹಿರಿಯರು ಪ್ರಕೃತಿಯ ಬದಲಾವಣೆಗೆ ತಕ್ಕಂತೆ ಆರೋಗ್ಯವನ್ನು ಕಾಪಾಡಿಕೊಳ್ಳಲು ರೂಪಿಸಿದ ಇಂತಹ ನೈಸರ್ಗಿಕ “ಮನೆಮದ್ದು” ನಿಜಕ್ಕೂ ಅದ್ಭುತವಾಗಿದೆ ಎಂದು ಹೇಳಿದರು.

ಮೃಗಶಿರ ಮಳೆ ಕೊಡುವ ಸಮಯದ ಮುಂಚಿತವಾಗಿ ಔಷಧ ಗುಳಿಗೆ ಉಚಿತವಾಗಿ ಪಡೆದ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಜಿಲ್ಲಾ ಮುಖ್ಯ ಸಂಚಾಲಕ ಬಸವರಾಜ್ ಶೀಲವಂತರ್, ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್, ಪಾಸ್ಟರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಅಪ್ಪಣ್ಣವರ್, ಕುಕನೂರಿನ ಗುದ್ನೆಪ್ಪ ಹೆಗಡೆ ಮುಂತಾದವರು ಉಪಸ್ಥಿತರಿದ್ದರು.

## ನಾಡ ಪ್ರಭು ಕೆಂಪೇಗೌಡ ರಾಜ್ಯ ಪ್ರಶಸ್ತಿಗೆ: ಕುಮಾರಸ್ವಾಮಿ ಹಿರೇಮಠ ಭಾಜನ

ಅ.ಶ. ಸುದ್ದಿ ಕುಕನೂರು

**ಕುಕನೂರು: ಸೌರಭ ಸಾಂಸ್ಕೃತಿಕ ಕಲಾ ಬಳಗ ಹಿರೇಮನ್ನಾಪುರ ಇವರ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಆರು ಗಣ್ಯ ವ್ಯಕ್ತಿಗಳ ಹೆಸರಿನಲ್ಲಿ ನೀಡುವ ರಾಜ್ಯ ಪ್ರಶಸ್ತಿಗೆ ಕುಕನೂರು ಪಟ್ಟಣದ ಕುಮಾರಸ್ವಾಮಿ. ಪಿ. ಹಿರೇಮಠ ಇವರ ಸಮಾಜ ಸೇವೆಯನ್ನು ಗುರುತಿಸಿ ನಾಡ ಪ್ರಭು ಕೆಂಪೇಗೌಡ ರಾಜ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.**



ಜೂನ್ 14ರಂದು ಬೆಂಗಳೂ-ರಿನ ಚಾಮರಾಜ ಪೇಟೆಯ ಕನ್ನಡ ಸಾಹಿತ್ಯ ಪರಿಷತ್, ಅಕ್ಕಮಹಾದೇವಿ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿಯನ್ನು ಪಡೆದುಕೊಳ್ಳಲಿದ್ದಾರೆ ಎಂದು ಸಂಘಟಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 1.42 ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ವಶ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ದೆಹಲಿಯ ಇಂದಿರಾ ಗಾಂಧಿ ಅಂತರಾಷ್ಟ್ರೀಯ (ಐಜಿಐ) ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬ್ಯಾಂಕಾಕ್‌ನಿಂದ ಆಗಮಿಸಿದ ಪ್ರಯಾಣಿಕರೊಬ್ಬರಿಂದ ಸುಮಾರು 1.42 ಕೋಟಿ ರೂ. ಮೌಲ್ಯದ ಶಂಕಿತ ಹೈಡ್ರೋಪೋನಿಕ್ ಗಾಂಜಾ ವಶಪಡಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**



ಬ್ಯಾಂಕಾಕ್‌ನಿಂದ ಆಗಮಿಸಿದ ಪ್ರಯಾಣಿಕನನ್ನು ವಿಮಾನ ನಿಲ್ದಾಣದಲ್ಲಿ ಹಸಿರು ಚಾನಲ್ ದಾಟಿದ ನಂತರ ತಡೆಹಿಡಿಯಲಾಯಿತು ಎಂದು ಅಧಿಕೃತ ಹೇಳಿಕೆ ತಿಳಿಸಿದೆ.ಪ್ರಯಾಣಿಕರ ಸಾಮಾನುಗಳ ಎಕ್ಸ್-ರೇ ಸ್ಕ್ರೀನಿಂಗ್ ಸಮಯದಲ್ಲಿ, ಕಸ್ಟಮ್ಸ್ ಅಧಿಕಾರಿಗಳು ಅನುಮಾನಾಸ್ಪದ ಚಿತ್ರಗಳನ್ನು ಗಮನಿಸಿದರು, ಇದು ವಿವರವಾದ ಪರೀಕ್ಷೆಗೆ ಕಾರಣವಾಯಿತು.ಶೋಧನೆಯಲ್ಲಿ ಸುಮಾರು 4.045 ಕೆಜಿ ತೂಕದ ಹೈಡ್ರೋಪೋನಿಕ್ ಕಳೆ (ಗಾಂಜಾ) ಹೊಂದಿರುವ ಶಂಕಿತ ಆರು ನಿರ್ವಾತ-ಮುಚ್ಚಿದ ಪ್ಯಾಕೆಟ್‌ಗಳು ಪತ್ತೆಯಾಗಿವೆ ಎಂದು ಹೇಳಿಕೆ ತಿಳಿಸಿದೆ. ವಶಪಡಿಸಿಕೊಂಡ ನಿಷಿದ್ಧ ವಸ್ತುವು ಸುಮಾರು 1.42 ಕೋಟಿ ರೂ.ಗಳ ಮಾರುಕಟ್ಟೆ ಮೌಲ್ಯವನ್ನು ಹೊಂದಿದೆ ಎಂದು ಅದು ಹೇಳಿದೆ.ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟೆನ್ಸಸ್ (ಎನ್‌ಡಿಪಿಎಸ್) ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಮತ್ತು ರವಾನೆಯ ಮೂಲ ಮತ್ತು ಉದ್ದೇಶಿತ ಸ್ವೀಕರಿಸುವವರನ್ನು ಕಂಡುಹಿಡಿಯಲು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಹೇಳಿಕೆ ತಿಳಿಸಿದೆ. ಕಳ್ಳಸಾಗಣೆ ಪ್ರಯತ್ನಕ್ಕೆ ಸಂಬಂಧಿಸಿದಂತೆ ಪ್ರಯಾಣಿಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅದು ಹೇಳಿದೆ.ಹೈಡ್ರೋಪೋನಿಕ್ ಕಳೆ ಮಣ್ಣಿನ ಬದಲು ಪೌಷ್ಟಿಕ-ಸಮೃದ್ಧ ನೀರಿನಲ್ಲಿ ಬೆಳೆಸುವ ಹೆಚ್ಚಿನ ಸಾಮರ್ಥ್ಯದ ಗಾಂಜಾ ವಿಧವಾಗಿದೆ.

# ವಿದ್ಯಾರಂಭ ಕೇಂದ್ರವಾದ ಶ್ರೀಧರ ಮುರುಡಿ ಹಿರೇಮಠ

## ಮಗುವಿನ ಕೈಹಿಡಿದು ಅಕ್ಷರ ಬರೆಸುತ್ತಿರುವ ಶ್ರೀ ಬಸವಲಿಂಗೇಶ್ವರ ಶ್ರೀಗಳು

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಶಾಲೆಗೆ ಪ್ರವೇಶ ಪಡೆಯುವ ಮುನ್ನ ಮಕ್ಕಳಿಗೆ ಧಾರ್ಮಿಕ ಸಂಸ್ಕಾರ ಮತ್ತು ವಿದ್ಯೆಯ ಆರಂಭಿಕ ಆಶೀರ್ವಾದ ದೊರಕಲಿ ಎಂಬ ಉದ್ದೇಶದಿಂದ ಶ್ರೀಧರ ಮುರುಡಿ ಹಿರೇಮಠದ ಶ್ರೀ ಬಸವಲಿಂಗೇಶ್ವರ ಶ್ರೀಗಳು ತಮ್ಮ ಕೈಯಾರೆ ಮಕ್ಕಳಿಗೆ ಮೊದಲ ಅಕ್ಷರ ಬರೆಸುವ ಮೂಲಕ ಅಕ್ಷರಾಭ್ಯಾಸ ಮಾಡಿಸಿದರು.**

ಐತಿಹಾಸಿಕ ಹಾಗೂ ಧಾರ್ಮಿಕ ಹಿನ್ನೆಲೆಯುಳ್ಳ ಯಲಬುರ್ಗಾದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಸಾಂಪ್ರದಾಯಿಕ ಅಕ್ಷರಾಭ್ಯಾಸ ಕಾರ್ಯಕ್ರಮವು ಭಕ್ತಿಭಾವದಿಂದ ಶ್ರೀಮಠದ ಆವರಣದಲ್ಲಿ ಬೆಳಗಿನ ಜಾವ ಲಿಂಗದೀಕ್ಷೆ ಕಾರ್ಯಕ್ರಮದ ಬಳಿಕ ಬೆಳಗ್ಗೆ 9 ಗಂಟೆಯಿಂದ ಆರಂಭವಾಯಿತು. ಬೆಳಗ್ಗೆಯಿಂದಲೇ ಸಾವಿರಾರು ಭಕ್ತರು ತಮ್ಮ ಮಕ್ಕಳೊಂದಿಗೆ ಮಠಕ್ಕೆ ಆಗಮಿಸಿ ಕರ್ತೃ ಗದ್ದುಗೆ ದರ್ಶನ ಪಡೆದು ಶ್ರೀಗಳ ಆಶೀರ್ವಾದ ಪಡೆದರು. ಪೀಠಾಧಿಪತಿ ತಮ್ಮ ಅಮೃತ ಹಸ್ತದಿಂದ ಪುಟ್ಟ ಮಕ್ಕಳಿಗೆ ಪಾಟಿ ಹಾಗೂ ನೋಟ್‌ಬುಕ್ ಮೇಲೆ ಮೊದಲ ಅಕ್ಷರಗಳನ್ನು ಬರೆಸುವ ಮೂಲಕ ವಿದ್ಯಾರಂಭ ನೆರವೇರಿಸಿದರು.



ಈ ಶುಭ ಕ್ಷಣಕ್ಕೆ ಸಾಕ್ಷಿಯಾಗಲು ಕೊಪ್ಪಳ ಜಿಲ್ಲೆಯ ವಿವಿಧ ಗ್ರಾಮಗಳಷ್ಟೇ ಅಲ್ಲದೇ, ಇತರ ಜಿಲ್ಲೆಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಪಾಲಕರು ಮಕ್ಕಳೊಂದಿಗೆ ಆಗಮಿಸಿದ್ದರು. ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲಕರು ತಮ್ಮ ಮಕ್ಕಳ ಉಜ್ವಲ ಭವಿಷ್ಯ, ಉತ್ತಮ ಶಿಕ್ಷಣ ಹಾಗೂ ಸಂಸ್ಕಾರಯುತ ಜೀವನಕ್ಕಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಮಠದ ಆವರಣದಲ್ಲಿ ದಿನವಿಡೀ ಭಕ್ತರ ಸಂಚಾರ ಹೆಚ್ಚಿದ್ದು, ಧಾರ್ಮಿಕ ಹಾಗೂ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಅಕ್ಷರಾಭ್ಯಾಸ ಬಳಿಕ ಸಹಸ್ರಾರು ಭಕ್ತಾದಿಗಳು ಶ್ರೀಮಠದ ದಾಸೋಹ ಭವನದಲ್ಲಿ ಮಹಾಪ್ರಸಾದ ಸ್ವೀಕರಿಸಿದರು. ಮಹಿಳೆಯರು, ಹಿರಿಯರು ಹಾಗೂ ಮಕ್ಕಳು ಸಾಗರೋಪಾದಿಯಲ್ಲಿ ಭಕ್ತರು ಭಾಗವಹಿಸಿ ಶ್ರೀಗಳ ಕೃಪೆಗೆ ಪಾತ್ರರಾದರು.

## ವಿದ್ಯುತ್ ಖಾಸಗಿಕರಣ ವಿರೋಧಿಸಿ : ಕ.ವಿ. ಪ್ರ. ನಿ. ನೌಕರ ಸಂಘದ ವತಿಯಿಂದ ಹೋರಾಟಕ್ಕೆ ಬೆಂಬಲ ಸೂಚನೆ,,



ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕ.ವಿ. ಪ್ರ. ನಿ. ನೌಕರ ಸಂಘದ ವತಿಯಿಂದ ಹಾಗೂ ನೌಕರರ ಅಧಿಕಾರಿಗಳು ಒಕ್ಕೂಟದಿಂದ ಜೂನ್ 09ರಂದು ವಿದ್ಯುತ್ ಖಾಸಗಿಕರಣ ವಿರೋಧಿಸಿ ತಮ್ಮ. ತಮ್ಮ ಸಲಹೆ ಸೂಚನೆ ಸಹಕಾರವನ್ನು ನೀಡಿದರು. ಕೊಪ್ಪಳ ವೃತ್ತದ ಕೊಪ್ಪಳ ವಿಭಾಗದ ಅಧಿಕಾರಿ ಮತ್ತು ನೌಕರರು ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ವಿರೋಧಿಸಿ ಹಾಗೂ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸುವ ಕುರಿತು.**

ಟಾಟಾ ಕಂಪನಿಯ ಖಾಸಗಿಕರಣವನ್ನು ವಿರೋದಿಸುವ ಮುಂದಿನ ಹೋರಾಟ ರೂಪರೇಷೆಗಳನ್ನು ನಿಗದಿಪಡಿಸಲು ವೃತ್ತದ ಅಧಿಕ್ಷಕ ಅಭಿಯಂತರರು ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರುಗಳು, ಲೆಕ್ಕಾಧಿಕಾರಿಗಳು, ಸಹಾಯಕ ಅಭಿಯಂತರರು, ಸಹಾಯಕ ಲೆಕ್ಕಾಧಿಕಾರಿಗಳು, ಶಾಖಾಧಿಕಾರಿಗಳು, ಕೊಪ್ಪಳ.ವಿಭಾಗ ಎಲ್ಲ ಒಕ್ಕೂಟದ ಪದಾಧಿಕಾ-ರಿಗಳು ಸ್ಥಳೀಯ ಸಮಿತಿಯ ಪದಾಧಿಕಾ-ರಿಗಳು ಮತ್ತು ಕಲ್ಯಾಣ ಸಂಸ್ಥೆಯ ವೃತ್ತದ.

ಸಂಘಟನಾ ಕಾರ್ಯದರ್ಶಿ, ಕೇಂದ್ರ ಕಾರ್ಯ ಸಮಿತಿ ಸದಸ್ಯರು ಇಂಜಿನಿಯರ್ ಅಸೋಸಿಯೇಷನ್ ಕೇಂದ್ರ ಸಮಿತಿ ಸದಸ್ಯರು, ಅಧ್ಯಕ್ಷರು ಕಾರ್ಯದರ್ಶಿಗಳು, ಲೆಕ್ಕಾಧಿಕಾರಿಗಳ ಸಂಘ ಕೇಂದ್ರ ಸಮಿತಿ ಸದಸ್ಯರು ಅಧ್ಯಕ್ಷರು ಕಾರ್ಯದರ್ಶಿಗಳು. ಡಿಪ್ಲೋಮಾ ಇಂಜಿನಿಯರ್ ಸಂಸ್ಥೆಯ ಕೇಂದ್ರ ಸಮಿತಿ ಸದಸ್ಯರು ಅಧ್ಯಕ್ಷರು ಕಾರ್ಯದರ್ಶಿಗಳು. ವೃತ್ತದ ಎಲ್ಲ ವೆಲ್ಫೇರ್ ಅಸೋಸಿಯೇಷನ.ಅಧ್ಯಕ್ಷರು ಕಾರ್ಯದರ್ಶಿಗಳು.

ಪಿಂಚಣಿದಾರರ ಸಂಘದ ಪದಾಧಿಕಾರಿಗಳು, ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರ ಸಂಘದ ಸದಸ್ಯರು. ರೈತ ಭಾಂದವರು ಭಾಗವಹಿಸಿ ಸಭೆಯನ್ನು ಖಾಸಗಿಕರಣ ವಿರೋಧಿಸಿ ತಮ್ಮ ತಮ್ಮ ಸಲಹೆ ಸೂಚನೆ ಸಹಕಾರವನ್ನು ನೀಡಿದರು. ಮುಂದಿನ ಉಗ್ರ ಹೋರಾಟಕ್ಕೆ ಬೆಂಬಲ ಸೂಚಿಸಿದರು ಕೇಂದ್ರ ಸಮಿತಿಯು ನೀಡುವ ಮುಂದಿನ ಹೋರಾಟಕ್ಕೆ ಸಜ್ಜಾಗಲು ಕೋರಲಾಯಿತು.

## ಶಾಸಕ ಬಸವರಾಜ ರಾಯರೆಡ್ಡಿಯವರಿಗೆ ಸಚಿವ ಸ್ಥಾನ ನೀಡುವಂತೆ ಲಂಕೇಶ್ ಎಚ್ ಮರಕಟ್ಟ ಮನವಿ

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಕ್ಷೇತ್ರದ ಶಾಸಕ ಬಸವ ರಾಜ ರಾಯರೆಡ್ಡಿಯವರಿಗೆ ಸಿಎಂ ಡಿ.ಕೆ.ಶಿವಕುಮಾರ ಅವರ ನೇತೃತ್ವದ ಸರ್ಕಾರದಲ್ಲಿ ಹಿರಿತನವನ್ನು ಗುರ್ತಿಸಿ ಸಚಿವ ಸ್ಥಾನವನ್ನು ಕಲ್ಪಿಸಿಕೊಡುವಂತೆ ಲಂಕೇಶ್ ಎಚ್ ಮರಕಟ್ಟ ಬ್ಲಾಕ್ ಕಾಂಗ್ರೆಸ್ ಸಮಿತಿಯ ಸಾಮಾಜಿಕ ಜಾಲತಾಣ ಬ್ಲಾಕ್ ಕಾರ್ಯ ದರ್ಶಿ ಮನವಿ ಮಾಡಿದ್ದಾರೆ. ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಕ್ಷೇತ್ರದಲ್ಲಿ ಆರು ಭಾರಿ.**



ಶಾಸಕರಾಗಿ, ಸಂಸದರಾಗಿ,- ಎರಡು ಭಾರಿ ಸಚಿವರಾಗಿ, ದೆಹಲಿ ವಿಶೇಷ ಪ್ರತಿನಿಧಿಯಾಗಿ,ಸಿ-ಎಂ ಆರ್ಥಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿರುವ ಶಾಸಕ ಬಸವರಾಜ ರಾಯರೆಡ್ಡಿಯವರು ಜನಪ್ರಿಯತೆ ಗಳಿಸಿಕೊಂಡವರು. ಕ್ಷೇತ್ರದಲ್ಲಿ ಶಿಕ್ಷಣ ಕ್ರಾಂತಿಯನ್ನು ಮಾಡುವ ಮೂಲಕ ಸಾಕಷ್ಟು ಅಭಿವೃದ್ಧಿ ಮಾಡುವ ಮೂಲಕ ರಾಜ್ಯದಲ್ಲಿ ಮಾದರಿ ಕ್ಷೇತ್ರವನ್ನಾಗಿ ಮಾಡಿರುವ ಶಾಸಕ ಬಸವರಾಜ ರಾಯರಡ್ಡಿ ಯವರ ಹಿರಿತನ, ನ ಅನುಭವವನ್ನು ಗುರ್ತಿಸಿ, ಸಿಎಂ ಡಿ.ಕೆ.ಶಿವಕುಮಾರ ಅವರ ನೇತೃತ್ವದ ಸರ್ಕಾರದಲ್ಲಿ ಎರಡನೇ ಪಟ್ಟಿಯಲ್ಲಿ ಸಚಿವನ್ನಾಗಿ ಆಯ್ಕೆ ಮಾಡುವಂತೆ. ಮನವಿ ಮಾಡಿಕೊಂಡಿದ್ದಾರೆ.

# ಕದಸಸ ಸಂಸ್ಥಾಪಕ ಪ್ರೊ.ಬಿ.ಕೃಷ್ಣಪ್ಪನವರ ಜಯಂತಿ ಆಚರಣೆ

ಅ.ಶ. ಸುದ್ದಿ ನರಗುಂದ

**ಸಂಘರ್ಷ ಸಮಿತಿ (ರಿ) ನರಗುಂದ ಮತ್ತು ದಲಿತ ಸಂಘಟನೆಯ ಒಕ್ಕೂಟ್ ದಿಂದ ನರಗುಂದದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕರಾದ ಪ್ರೊ ಬಿ ಕೃಷ್ಣಪ್ಪನವರ. ಜಯಂತೋತ್ಸವನ್ನು ಆಚರಿಸಲಾಯಿತು ಮತ್ತು ದಿನಾಂಕ್ 13/06/2026 ರಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ) ಗದಗ್ ಜಿಲ್ಲಾ ಸಮಿತಿ ವತಿಯಿಂದ ಗದಗದಲ್ಲಿ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇಕಡ70% ಕ್ಕಿಂತ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಧಕ-ರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.**

ವಿದ್ಯಾರ್ಥಿಗಳು ತಮ್ಮ ಮಾಹಿತಿಯನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ನರಗುಂದ ಸಂಚಾಲಕರು ದತ್ತಾತ್ರೇಯ ಜೋಗನೂರ್ ಮತ್ತು ಮಹಿಳಾ ಒಕ್ಕೂಟದ ತಾಲೂಕ ಸಂಚಾಲಕರು ಶಾರದ ಹಳೆಮಣಿ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟ ಸಂಚಾಲಕರು ಸಂಜು ಜೋಗನವರ್ ಹತ್ತಿರ ಹೆಸರು ನೊಂದಾಯಿಸಬೇಕೆಂದು ತಿಳಿಸಲಾಗಿದೆ ಮತ್ತು ಇದೇ ಸಂದರ್ಭದಲ್ಲಿ ಮಾದಿಗ ಸೇನೆಯ ರಾಜ್ಯಧ್ಯಕ್ಷರಾದ ಡಾಕ್ಟರ್ ಮತ್ತು ಸುರಕೋಡ ಮಾತಾಡಿ ಪ್ರೊಫೆಸರ್ ಬಿ ಕೃಷ್ಣಪ್ಪ ಅವರು ದಲಿತ ಸಂಘರ್ಷ ಸಮಿತಿಯನ್ನು ದಲಿತರ ಮತ್ತು ಸಮಾಜದಲ್ಲಿ ಹಿಂದುಳಿದವರ ಮೇಲೆ ಆಗುತ್ತಿರುವ ಶೋಷಣೆ ದಬ್ಬಾಳಿಕೆಯನ್ನು ತಡೆದು ಕರ್ನಾಟಕದ ಅಂಬೇಡ್ಕರ್ ಎಂದು ಅನಿಸಿಕೊಂಡಿದ್ದಾರೆ.





ಎಂದು ತಿಳಿಸಿದರು ಇದೇ ಸಮಯದಲ್ಲಿ ನವೀನ್ ಜೋಗನವರ, ಮುತ್ತು ಮಾದರ್, ಬಸು ದಂಡಾಪುರ್,ನೀಲಗಂಗಾ ಮಾದರ್, ಬಸ್ಸಮ್ಮ ಗುಡಿಕಾರ್, ಸುಶೀಲ ನಾಗರಹಳ್ಳಿ, ಅನಸೂಯ ಮಾದರ್, ಫಕೀರವ ರೋಗನ್ನವರ್, ಸುಮಿತ್ರ ತಳವಾರ್, ಭಾರತಿ ಮಾದರ್, ಮಹಾಂತೇಶ್ ಪೂಜಾರ, ವಿಕ್ರಂ ಹೊನಕೇರಿ, ವೆಂಕಟೇಶ್ ಕಾನಪೆಟ್, ಕಿರಣ್ ಜೋಗನವರ,ಸಂಜು ಜೋಗನ್ನವರ.ಕಾಸಿನಾಥ, ಹನುಮಂತ್ ಶಿರಹಟ್ಟಿ, ರಾಹುಲ್ ಲಂಬಾಣಿ, ಬಸು ಜೋಗಣ್ಣವರ,ಗುರುನಾಥ ಕೆಂಗಾರಕರ, ಇನ್ನೂ ಮುಂತಾದವರು ಉಪಸ್ಥಿತರಿದ್ದರು.

# ಲೇಖಕರ ದಿನಚರಿ...

## ಹರಕೆಯ ಹಿಮಗಿರಿ

ಓ ನನ್ನ ಮುದ್ದಿನ ಕಂದನೇ,
ಕೇಳು ಈ ಹರಕೆಯ ಸಾರವನು,
ಬರಿ ನೆಲದ ಪಥವಲ್ಲ ನಿನ್ನದು,
ಚುಂಬಿಸು ಆ ಬಾನೆತ್ತರವನು,
ಬೆಳೆದು ನಿಲ್ಲು ನೀ ಶಿಖರದಂತೆ
ದಿಗಂತದ ಅಂಚಿನಲಿ,
ಜಗವ ಬೆಳಗುವಧ್ರುವತಾರೆಯಾಗು
ನೀ ಬಾಳ ಪಯಣದಲಿ.

ಮಂದಾನಿಲನಂತೆ ಮೆಲ್ಲನೆ
ಪಸರಿಸಲಿ ನಿನ್ನ ಖ್ಯಾತಿಯು,
ತಂಗಾಳಿಯ ಸುಗಂಧದಂತಿರಲಿ
ನಿನ್ನ ಸಜ್ಜನಿಕೆಯ ಪ್ರೀತಿಯು,
ಸೀಮೆಗಳ ದಾಟಿ ಹಬ್ಬಲಿ
ನಿನ್ನ ಹೆಸರಿನ ಇಂಪಿನ ನಾದ,
ಪ್ರತಿ ಎದೆಯ ಅಂಗಳದಿ
ಮೊಳಗಲಿ ನಿನ್ನ ಮಧುರ ಸಂವಾದ.

?ಅರಿವೆಂಬ ಅತಳ ಮಹೋದಧಿಯ
ಆಳದಲಿ ಮಿಂದೇಳು,
ಸತ್ಯದ ಮುತ್ತುಗಳ ಹೊತ್ತು
ಜ್ಞಾನದ ಚೇತನವಾಗಿ ಏಳು,
ತಿಳಿವಿನ ತೆರೆಗಳು ನಿನ್ನಲ್ಲಿ
ಹೊಸ ಚಿಂತನೆಗಳ ತರಲಿ,
ಅಗಾಧ ಮೌನವೂ ಕೂಡ
ಅರಿವಿನ ಸಾರವನ್ನೇ ಸಾರಲಿ.

?ಸಹ್ಯಾದ್ರಿಯ ಸಾಲಿನಂತೆ
ತೆರೆದಿರಲಿ ನಿನ್ನ ಸ್ನೇಹದ ಬಾಹು,
ಆಶ್ರಯ ಬೇಡಿ ಬಂದವರ
ಅಪ್ಪುವ ಮಮತೆಯೇ ನಿನ್ನ ಸಾಹು,
ಹಿಮಾಲಯದ ಹಿಮದಂತೆ
ಪ್ರಶಾಂತವಾಗಿರಲಿ ನಿನ್ನ ಪ್ರೀತಿ,
ಅಚಲವಾಗಿ, ಅಚ್ಯುತವಾಗಿ
ಮೂಡಲಿ ಮಾನವೀಯ ಸಂಸ್ಕೃತಿ.

?ಈ ಜನ್ಮದಿನದ ಸುಪ್ರಭಾತ
ತರಲಿ ನವ ಚೈತನ್ಯದ ಹೊನಲು,
ಮೈಮನವ ತುಂಬಲಿ ಸದಾ
ನವ ಉಲ್ಲಾಸದ ಹಸಿರು ಹಂದರವು,
ಶತಮಾನದ ಹಾದಿಯಲಿ
ನಿನ್ನ ನಗುವು ಅಜರಾಮರವಾಗಿರಲಿ,
ನೂರು ಕಾಲ ನಿನ್ನ ಸಾಧನೆಯು
ಈ ಧರೆಯ ನಂದನವನ್ನಾಗಿಸಲಿ.



ಸುಮ ಬಿ.ಎಸ್.ಬೆಂಗಳೂರು.

## ನಾಯಿ ಮರಿ



ನಿನ್ನ ಮೈಗೆ ಬಣ್ಣ ಮೆತ್ತಿ
ಬಲೂನು ಕುಂಚ ಬಳಿಯೆ ಇಟ್ಟು
ನಕ್ಕು ನಲಿವ ಜನರ ಎದೆಯ
'ಮೆಚ್ಚುಜೀವ'ವೇ!

ಮಳೆಯೆ ಬರಲಿ ಚಳಿಯೆ ಇರಲಿ
ಬಿಸಿಲು ಗಾಳಿ ರಾಚುತಿರಲಿ
ಸಾಹಸದೆ ಸೆದೆಬಡಿವ
'ದಿವ್ಯ ಭಾವ'ವೇ!

ಹೊಲಬನೆಲ್ಲ ತಿಂದು ತೇಗಿ
ರೋಗ ಮೆಟ್ಟನಿಲ್ವ ಯೋಗಿ
ಸದೃಢತೆಯನೆ ಜಗಕೆ ತೋರ್ವ
'ಸ್ವಾಸ್ಥ್ಯಸೇತು'ವೇ!

ನಿಯತಿಯನೆ ಹೊದ್ದು ಮೆದ್ದು
ಅಣತಿಯನು ನಯದಿ ಗೆದ್ದು
ಬದ್ಧತೆಯನೇ ಉಸಿರಾಡುವ
'ಜೀವಧಾತು'ವೇ!

ಮನುಜನೆಸೆವ ತುತ್ತ ತಿಂದು
ಕಲ್ಲಿನೇಟನುಂಡು ಬೆಂದು
ಛಲವ ಬಿಡದೆ ಒಲವ ಗಳಿಸೋ
'ಸ್ನೇಹ ಸಿಂಧು'ವೇ!

ಮನೆಗೆ ಬರುವ ಅತಿಥಿಗಳನು
ನಾದಸ್ವರದೆ ಸುಮ್ಮನಿರಿಸಿ
ಒಡೆಯನನ್ನು ಕೂಗಿ ಕರೆವ
'ಪರಮಾಪ್ತ ಬಂಧು'ವೇ!



ನೀ.ಶ್ರೀಶೈಲ ಹುಲ್ಲೂರು,
ಜಮಖಂಡಿ.

# 12 ಸಂವತ್ಸರವೇ ವನವಾಸ ಏಕೆ..!?

ವೇದವ್ಯಾಸರು ರಚನೆ ಮಾಡಿದ ಮಹಾಭಾರತ ಗ್ರಂಥ 18 ಪರ್ವಗಳ ನೂರಾರು ಉಪಪರ್ವಗಳ ಕೃತಿ. ಮಹಾಭಾರತದ ಮೊದಲನೇ ಪರ್ವ ಆದಿ ಪರ್ವ ನಂತರ ಬರುವುದೇ ಸಭಾ ಪರ್ವ. ಈ ಪರ್ವದಲ್ಲಿ ನಡೆದ ಒಂದು ಘಟನೆ ಮಹಾಭಾರತದ ಯುದ್ಧಕ್ಕೆ ನಾಂದಿ ಹಾಡಿದೆ ಎಂದರೇ ತಪ್ಪು ಆಗುವುದಿಲ್ಲ, ಏಕೆಂದರೆ ಈ ಪರ್ವದಲ್ಲಿ ಪಾಂಡವರ ಸೋಲು, ದ್ರೌಪದಿ ದೇವಿಗೆ ಆದ ಅಪಮಾನ, ಪಾಂಡವರು ಮತ್ತು ದ್ರೌಪದಿ ಎಲ್ಲರೂ ಕಾಡಿಗೆ ಹೋದ ಸಂದರ್ಭ ಮತ್ತೆ 12 ವರುಷ ವನವಾಸ, 1 ವರುಷ ಅಜ್ಞಾತವಾಸ ಎಲ್ಲವೂ ಬಂದಿದೆ.

ಈ ಸಂದರ್ಭದಲ್ಲಿ ವಿಶೇಷವಾಗಿ ನಾವು ಗಮನ ಕೊಡಬೇಕಾಗಿರುವ ಅಂಶ ಏನೆಂದರೆ, ಯಾಕೆ ಕೌರವರು ಮತ್ತು ಶಕುನಿ 12 ವರುಷವೇ ಕಾಡಿಗೆ ಹೋಗಬೇಕೆಂದು ಹೇಳಿದರು. ಒಂದು ವರುಷ ಅಜ್ಞಾತವಾಸ ಅವರು ಮಾಡಿಕೊಂಡಿದ್ದ ಒಪ್ಪಂದ, ಆ ಒಂದು ವರ್ಷದ ಅವಧಿಯಲ್ಲಿ ಯಾರ ಕಣ್ಣಿಗೆ ಕಾಣದಂತೆ ಇರಬೇಕು, ಪ್ರಾಯಃ ಕಂಡರೆ ಮತ್ತೆ 12 ವರುಷ ವನವಾಸ ಒಂದು ವರುಷ ಅಜ್ಞಾತವಾಸ.



ಈ ಒಂದು ವಿಷಯ ರಾಮಾಯಣದಲ್ಲಿಯೂ ಬಂದಿದೆ ರಾಮ 14 ವರ್ಷವೇ ಏಕೆ ಕಾಡಿಗೆ ಹೋದ, ಪಾಂಡವರು ಏಕೆ 12 ವರ್ಷವೇ ಹೋದರು.

1 ವರುಷ, 5 ವರುಷ, 8 ವರುಷ, 10 ವರುಷ, 20 ವರುಷ ಹೋಗ ಬಹುದಾಗಿತು, ಏಕೆ 12 ಮತ್ತು 14 ಇದರಲ್ಲಿ ಏನಾದರೂ ವಿಶೇಷ ಇದೆಯೇ. ಹೌದು ಇದರಲ್ಲಿ ಒಂದು ಸಂಖ್ಯಾಶಾಸ್ತ್ರದ ಜೊತೆಗೆ ಮುಖ್ಯವಾದ ಸಂದೇಶ ಅಡಗಿದೆ. ಒಬ್ಬ ಮನುಷ್ಯ ಯಾವುದೇ ಕಾರಣಕ್ಕಾಗಿ ಕಾಡಿಗೆ ಹೋದರೆ ಅವನು ಹಿಂತಿರುಗಿ ಬರಬಹುದು ಇಲ್ಲ ಬಾರದೇ ಇರಬಹುದು, ಅಂತಹ ಸಮಯದಲ್ಲಿ ಮನೆಯವರು, ಹೋಗಿರುವ ಮನುಷ್ಯ ಇದ್ದಾನೋ ಇಲ್ಲವೋ ಎಂದು ತಿಳಿಯ ಬೇಕಾದಲ್ಲಿ ಅವರು 12 ವರುಷ ಅಥವಾ 14 ವರುಷ ಅವರು ಕಾಯಬೇಕು, ಕಾದಮೇಲೂ ಬರಲಿಲ್ಲ ಎಂದರೆ ಅವರು ಇಲ್ಲ ಎಂದು ಪರಿಗಣಿಸಿ ಮುಂದಿನ ಕಾರ್ಯ ಮಾಡಬೇಕು. ಆದರು 12 ಮತ್ತು 14 ಏಕೆ..? ಯಾರು ಕಾಡಿಗೆ ಹೋಗುತ್ತಾರೆ ಅವರ ವಯಸ್ಸು 50ರ ಒಳಗೆ ಇದ್ದರೆ ಅವರಿಗಾಗಿ 14 ವರುಷ ಹಿಂತಿರುಗಿ ಬರುವವರೆಗೂ ಕಾಯಬೇಕು, 50ರ ಮೇಲೆ ಇದ್ದರೆ ಅವ–ರಿಗಾಗಿ 12 ವರುಷ ಕಾಯಬೇಕು, ಇದು ನಮಗೆ ಶಾಸ್ತ್ರಗಳು ಹೇಳಿಕೊಟ್ಟ ನಿಯಮ. ಹಾಗಾಗಿ ರಾಮ ಕಾಡಿಗೆ ಹೋದಾಗ 27 ವರುಷ ಆಗಿತ್ತು, ಇದನ್ನು ಚನ್ನಾಗಿ ಮಂಥರೆ ತಿಳಿದಿದ್ದಳು, ಪಾಂಡವರು ವನವಾಸ ಮಾಡಲು ಹೋದಾಗ ಎಲ್ಲರಿಗೂ 50 ವರುಷ ಆಗಿತ್ತು, ಹಾಗಾಗಿ 12 ವರುಷ ವನವಾಸ ಮಾಡಲು ತೀರ್ಮಾನಿಸಿದರು, ಮರಳಿ ಬರಲಿಲ್ಲ ಎಂದರೆ ಅವರು ಇಲ್ಲ ಎಂದು ತಿಳಿದು ಮುಂದಿನ ಕಾರ್ಯ ಮಾಡಿ ದುರ್ಯೋಧನನಿಗೆ ಪಟ್ಟ ಕಟ್ಟುವ ಆಲೋಚನೆಯಲ್ಲಿ ಈ ಸಭಾ ಪರ್ವದ ಸಭೆಯಲ್ಲಿ ತೀರ್ಮಾನಿಸಿದರು. ಕೃಷ್ಣನ ಅನುಗ್ರಹದಿಂದ ಯಾವುದೇ ರೀತಿಯ ತೊಂದರೆ ಇಲ್ಲದೆ 12 ವರುಷ ಮತ್ತು 1ವರುಷ ಅಜ್ಞಾತವಾಸ ಮುಗಿಸಿ ಬಂದ ಪಾಂಡವರು ಯುದ್ಧಕ್ಕೆ ಸಜ್ಜಾದರು. ಕೃಷ್ಣಂ ವಂದೇ ಜಗದ್ಗುರುಂ.

ಮದ್ವೇಶ ಟಿ.ಆರ್.ತುಮಕೂರು.




# ಅವನು ಹೇಳದ ಮಾತುಗಳು

**'ಹೊರಗಿನ ಗದ್ದಲಕ್ಕಿಂತ ಒಳಗಿನ ಮೌನ ಗಾಢ' ಎಂದು ಕುವೆಂಪುರವರು ಹೇಳುವುದು ನಿಜ ಮೌನ ಎಲ್ಲವನ್ನು ತಿಳಿಸುತ್ತದೆ ತಿಳಿದುಕೊಳ್ಳುವವ–ರಿಗೆ ಮಾತ್ರ,ನಮ್ಮ ಸಮಾಜದಲ್ಲಿ ಗಂಡು ಮಕ್ಕಳು ಅಳಬಾರದು ಅವನು ಕಲ್ಲಿನಂತೆ ಕಠೋರವಾಗಿರಬೇಕೆಂಬ ಮಾತುಗಳನ್ನು ಹೇಳಿ ಹೇಳಿ ಗಂಡು ಮಕ್ಕಳ ಹೃದಯ ಭಾರ ಹೊತ್ತು ನಿಂತಿರುತ್ತದೆ. ಅಳುವ ಗಂಡಸನ್ನು ನಂಬಬಾರದು ನಗುವ ಹೆಂಗಸನ್ನು ನಂಬಬಾರದು ಎಂಬ ಗಾದೆ ಕೂಡ ಬಳಕೆಯಲ್ಲಿದೆ. ಇದೆಲ್ಲ ಗಮನಿಸಿದಾಗ ಪುರುಷನು ಭಾವನೆಗಳನ್ನು ಹೇಳದೆ ಮೌನವಾಗಿರಬೇಕಾ.......**

ತಿಳಿಯದು ಹೆಣ್ಣು ಮಕ್ಕಳು ಮನಸ್ಸಿನಲ್ಲಿರುವ ನೋವು ನಲಿವುಗಳನ್ನು ಆತ್ಮೀಯರ ಹತ್ತಿರ ಕೆಲವೊಮ್ಮೆ ಹೇಳಬಾರದವರ ಬಳಿಯೂ ಹೇಳಿಕೊಂಡು ಅಬ್ಬಾ !! ಎಂದು ಮನ ಹಗುರ ಮಾಡಿ ಕೊಳ್ಳುವುದರಲ್ಲಿ ನಿಸ್ಸೀಮರು, ಧರ್ಮರಾಜ ಕುಂತಿಗೆ ಕೊಟ್ಟ ಶಾಪವನ್ನು ನಾವೆಲ್ಲ ಆಜ್ಞೆ ಎಂಬಂತೆ ಪರಿಪಾಲಿಸುತ್ತಿದ್ದೇವೆ. ಯಾವ ಗುಟ್ಟು ಹೆಣ್ಣು ಮಕ್ಕಳ ಬಾಯಲ್ಲಿ ನಿಲ್ಲಬಾರದೆಂಬದನ್ನ ಯಥ–ಾವತ್ತಾಗಿ ಪರಿಪಾಲಿಸುತ್ತಿದ್ದೇವೆ ಅಷ್ಟೇ ಪಾಪ ಗಂಡು ಮಕ್ಕಳು ಅದರಲ್ಲೂ ಅಪ್ಪನಾಗಲಿ, ಗಂಡನಾಗಲಿ, ಅಣ್ಣ ತಮ್ಮನಾಗಲಿ, ಗೆಳೆಯನಾಗಲಿ ಇವರೆಲ್ಲ ಭಾರವಾದ ಹೃದಯದಲ್ಲಿ ನೋವುಗಳನ್ನು, ದುಃಖಗಳನ್ನು ,ಹತಾಶೆಗಳನ್ನ ಅದುಮಿಟ್ಟುಕೊಂಡು ನಗುತ್ತಲೇ ಸಂಸಾರ ನೌಕೆಯನ್ನು ನಡೆಸುವರಲ್ಲ ಮೆಚ್ಚಲೇಬೇಕು.

ಒಬ್ಬ ತಂದೆ ಎಷ್ಟು ಕಠಿಣ. ತಾಯಿಯಂತೆ ಅವನೇನಾದರೂ ಗೋಳೋ ಎಂದು ಅತ್ತರೆ ಸಮಾಜ ಅವನನ್ನು ನೋಡುವ ದೃಷ್ಟಿಯ ಬದಲಾಗುತ್ತದೆ. ಗಂಡು ಮಕ್ಕಳು ಅತ್ತರೆ ಅದೇನು ಹುಡುಗಿ ತರ ಅಳ್ತಿಯಾ ಏನಾಗಿದೆ ಅಂತ ಗದರಿಸುವ ವೇಳೆಯಲ್ಲಿ ಅವರ ನೋವನ್ನು ಹೇಗೆ ಹೊರ ಹಾಕಬೇಕು,...ಆಗ ಅವರು ಯಾರು ಇಲ್ಲದ ಯಾರಿಗೂ ಗೊತ್ತಾಗದ ಹಾಗೆ ಕಣ್ಣೀರು ಹೊರಹಾಕಿ ಮತ್ತೆ ನಗು ಮುಖದಲ್ಲಿರಬೇಕು. ಅವನ ಭಾವನೆಗಳಿಗೆ ಬೆಲೆಯೇ ಇಲ್ಲವೇ ಒಂದು ಕಡೆಯಿಂದ ನೋಡಿದಾಗ ಹೆಣ್ಣು



ಮಗಳು ಜನಿಸಿದಾಗಲೇ ಅವನಿಗೆ ಆದ ಸಂತೋಷವನ್ನು ಬೇರೆಯವರು ಕಿತ್ತುಕೊಂಡು ಬಿಡುತ್ತಾರೆ ಅಯ್ಯೋ ನಿನಗೆ ಹೆಣ್ಣಾಯಿತಾ...


ಅಥವಾ ಹೆಣ್ಣು ಮಗಳು ಹುಟ್ಟಿದಳೇ... ಎಂಬ ಕೊಂಕು ನುಡಿಗಳಿಂದಲೇ ಪ್ರಾರಂಭ ,ಇನ್ನು ಮಗಳು ಋತುಮತಿ ಆದ–ಾಗ ತಂದೆಯ ಭಾವುಕರಾಗುತ್ತಾರೆ,ಅವನ ಜವಾಬ್ದಾರಿಗಳು ಮುಗಿಲು ಮುಟ್ಟುತ್ತವೆ .ಅವಳನ್ನು ಕಾಪಾಡಿಕೊಳ್ಳುವತ್ತ ಅವನ ಮನ ಹೊಯ್ದಾಡುತ್ತದೆ, ಇಲ್ಲಿ ಎಷ್ಟೋ ತಳ ಮಳದ ವಿಚಾರಗಳಿಗೆ ಮೌನವೇ ಪೂರ್ಣ ವಿರಾಮವಾಗುತ್ತದೆ. ದೂರದ ಊರಿಗೆ ಕಲಿಕೆಗೆ ಕಳಿಸಲು ಅಪ್ಪನ ಮನ ಒಪ್ಪದು ಆಗ ಅವನು ಹೇಳದ ಮಾತುಗಳು ಹಾಗೆ ಉಳಿಯುತ್ತವೆ. ಮಗಳು ಗಂಡನ ಮನೆಯಲ್ಲಿ ಹೊಂದಿಕೊಳ್ಳಲಾಗದೆ ತವರು ಮನೆ ಸೇರಿದಾಗ ತವರು ಶಾಶ್ವತವಲ್ಲ ಎಂಬ ಮಾತುಗಳು ಗಂಟಲಲ್ಲಿ ಉಳಿದು ಬಿಡುತ್ತವೆ.

ಅವನು ಹೇಳದ ಮಾತುಗಳು ಕಣ್ಣಿನಲ್ಲಿ ಕಾಣಬಹುದು, ಮುಖಭಾವದಲ್ಲಿ ನೋಡಬಹುದು, ಆ ಜಾಣ್ಮೆ ಇದ್ದರೆ ಅಪ್ಪನ ಬಗ್ಗೆ ತಿಳಿದಿದ್ದರೆ ಅಪ್ಪ ಒಂದು ಬೃಹದಾಕಾರದ .ಕಲ್ಲು ಬಂಡೆ ಗುಡುಗು, ಸಿಡಿಲು ,ಮಳೆ ಗಾಳಿಗಂಜದೆ ಇದ್ದಂತೆ. ಅಪ್ಪ ಹೆಣ್ಣು ಮಕ್ಕಳ ವಿಚಾರದಲ್ಲಿದ್ದಂತೆ ಮೃದುತ್ವ ಧೋರಣೆ ಗಂಡು ಮಕ್ಕಳಲ್ಲಿ ಖಂಡಿತ ಇರದು. ಮಗನಿಗೆ ನಾಲ್ಕು ಒದ್ದು, ಬೈದು ಬುದ್ಧಿ ಹೇಳಿ ಮನೆಯಿಂದ ಹೊರ ಹಾಕುವಂತ ಸಂದರ್ಭಗಳು ಬಂದಾಗ ಯೋಚಿಸದೆ ಕಠಿಣ ನಿರ್ಧಾರ ತೆಗೆದುಕೊಳ್ಳುವನು.

ಅದೇ ಮಗ ಉನ್ನತ ಸ್ಥಾನಕ್ಕೇರಿ ಸಮಾಜದಲ್ಲಿ ಸ್ಥಾನ ಮಾನ ಗಳಿಸಿದಾಗ ಆ ಸಂತಸದ ಕ್ಷಣಗಳನ್ನು ತನ್ನ ಸ್ನೇಹ ಬಳಗದಲ್ಲಿ ಹಂಚಿಕೊಂಡು ಸಂಭ್ರಮಿಸುತ್ತಾನೆ. ಆದ–ರೆ ಮಗನ ಮುಂದೆ ಸಂಭ್ರಮದ ಮಾತುಗಳು ಹೇಳಲಾಗದೆ ಹಾಗೆ ಉಳಿದುಬಿಡುತ್ತವೆ ಆ ಕ್ಷಣ ಅಪ್ಪನ ಕಣ್ಣನ್ನ ನೋಡಿ, ಜಗವೇ ಸಂಭ್ರಮಿಸುವ ಸಂತಸ ಅಲ್ಲಿರುತ್ತದೆ. ಹೀಗೆ ಅನೇಕ ವಿಚಾರಗಳನ್ನು ತೆಗೆದುಕೊಂಡಾಗ ಅವನು ಹೇಳದ ವಿಚಾರಗಳು, ಮಾತುಗಳು ಸಾಕಷ್ಟು ಇವೆ. ಅಪ್ಪ ವಜ್ರದಂತೆ ಕಾಠಿಣ್ಯ ಆದರೆ ಮನ ಹೂವಿನಂತೆ ಮೃದು, ತಿಳಿದುಕೊಳ್ಳಬೇಕಷ್ಟೇ ಹೃದಯದಲ್ಲಿಟ್ಟುಕೊಂಡ ಭಾವನೆಗಳೇ ಹಾಗೇ ಅಳಿಸಲಾಗದ ಶಾಸನಗಳಾಗಿ ಉಳಿದ ಬಿಟ್ಟಿರುತ್ತವೆ.

ಬಾಯ್ಮಾತಿಗೆ ತೋರಿಸುವ ಕೋಪ ಬೈಗುಳಗಳೆಲ್ಲ ತಾತ್ಕಾಲಿಕ. ಪ್ರೀತಿ ವ್ಯಕ್ತಪಡಿಸದೆ ಮೌನವೇ ಉತ್ತರವಾಗಿರುತ್ತದೆ. ಕೆಲವೊಮ್ಮೆ ನೋವು, ಸಂತಸ ಎರಡನ್ನು ಹೇಳಲಾಗದೆ ಮೌನದೊಳಗೆ ಮರೆಯಾಗಿ ಬಿಡುತ್ತಾನೆ. ಹೇಳಬೇಕಾದ , ಮನ ಬಿಚ್ಚಿ ಮಾತನಾಡಬೇಕಾದ ಅನೇಕ ವಿಚಾರಗಳನ್ನು ಹೇಳದೆ ಹಾಗೆ ನಿಷ್ಠುರವಾಗಿ ಉಳಿದುಬಿಡುತ್ತಾನೆ . ದ ರಾ ಬೇಂದ್ರೆ ಹೇಳುವಂತೆ 'ಹೃದಯದ ಮಾತು ತುಟಿಗಳಿಗೆ ಬಂದಿತೇನೋ ಕೆಲವೊಮ್ಮೆ ಕಣ್ಣುಗಳೇ ಅದನ್ನು ಹೇಳುತ್ತವೆ' ನಿಜ ಅವನು ಏನು ಹೇಳಲಿಲ್ಲ ಆದರೆ ಅವನ ಕಣ್ಣುಗಳೇ ಎಲ್ಲ ಕತೆಯನ್ನು ತಿಳಿಸಿಬಿಡುತ್ತವೆ.

ಕೋಪ ಮಾಡಿಕೊಂಡ ಮಕ್ಕಳ ಮೇಲೆ, ತಂದೆ ನಮ್ಮನ್ನು ಸೇರುವುದಿಲ್ಲ ,ನಮ್ಮ ಮೇಲೆ ಪ್ರೀತಿ ಇಲ್ಲ ಎಂಬ ದೂರುಗಳ ಬಿಟ್ಟು ಬೇರೆನೂ ಇಲ್ಲ ಅಲ್ಲವೇ .ಮಗ ಮಗಳು ಹೇಗಿದ್ದಾರೆ ಎಂಬ ಚಡಪಡಿಕೆ ಪ್ರತಿಕ್ಷಣ ಇರುತ್ತದೆ ,ಅವರ ಪ್ರತಿ ಹೆಜ್ಜೆಯ ಮೇಲು ಗಮನವಿರುತ್ತದೆ. ಸಾಗರದಷ್ಟು ಪ್ರೀತಿ ಮಕ್ಕಳ ಮೇಲೆ ಇರುತ್ತದೆ. ಅವನು ಹೇಳದ ಮಾತುಗಳು ಅವನ ತ್ಯಾಗದಲ್ಲಿರುತ್ತದೆ, ಅರಿತುಕೊಂಡು ನಡೆದರೆ ಯಾವ ಭಿನ್ನಾಭಿಪ್ರಾಯಗಳು ಇರುವುದಿಲ್ಲ. ಹಾಗಾಗಿ ಅಪ್ಪ ಹೇಳದ ಮಾತುಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಅವನಿಗೆ ಹಿಡಿಯಷ್ಟು ಪ್ರೀತಿ ,ಗೌರವ ಕೊಟ್ಟುಬಿಡಿ ಅವನು ಪಟ್ಟ ಶ್ರಮಕ್ಕೆ, ತ್ಯಾಗಕ್ಕೆ ಎಲ್ಲವೂ ಸಾರ್ಥಕವಾಗಿ ಜೀವನದಲ್ಲಿ ಧನ್ಯತಾ ಭಾವ ಪಡೆಯುತ್ತಾನೆ. ಅಪ್ಪ ನೀ ಹೇಳದೆ ಉಳಿದ ಮಾತುಗಳು ನನ್ನನ್ನು ಇಂದಿಗೂ ಕಾಡುತ್ತಿವೆ......



ಡಾ.ರೇಖಾ ಉದಯ

# ನಾನೀಗ ನದಿಯಲ್ಲ


ಶಿಖರದೊಳಗಿನ
ಕಗ್ಗತ್ತಲೆಯ ತೂರಿ
ಜನನ
ನವಿರಾದ ಝರಿಯಾದೆ
ಅಕ್ಕಪಕ್ಕ ಚಿಗುರು
ಹೂವಿನ
ಸಂತಸದ ಸ್ವಾಗತ ।

ವರುಷ ಕಳೆದಂತೆ
ಬೆಳೆಯುತ್ತಲಿದ್ದೆ
ಸುತ್ತಲಿನ ಕಸ ಕಡ್ಡಿ
ಕಲ್ಲು ಮುಳ್ಳು
ಮಾರ್ಗ ಮಧ್ಯದಿ
ಅದೆಷ್ಟು ಅಡ್ಡಿಮಾಡಿದವು
ಎನ್ನೊಡಲ
ಘಾಸಿಮಾಡಿದವು ।



ಹಾಗೆಯೇ ಬೆಳೆಯುತ್ತಲೇ ಹೋದೆ
ಸಾಗರನೊಂದಿಗಿನ ನಂಟಿನ
ಮುಂಚೆ
ಯೋಚಿಸಿದೆ?ಯೋಚಿಸಿದೆ
ಹಿರಿಯಕ್ಕರೆಂದರು
ನನ್ನಸ್ತಿತ್ವವೇ ಸಾಗರವೆಂದು ।

ಅವರಂತೆ ನಾನೂ ಒಂದಾದೆ
ಎನ್ನೊಡಲ ಸಿಹಿ ಮತ್ತು ಹೆಸರು
ಅವನಲ್ಲೇ ಬೆರೆತವು
ನಾನೀಗ ನದಿಯಲ್ಲ?
ಭೋರ್ಗರೆವ
ಸಮುದ್ರ ।



ಗಂಗಾ ಚಕ್ರಸಾಲಿ, ಬೆಳಗಾವಿ

# ಗಜಲ್..

ಮುಗ್ಧ ಜೀವಿಗಳ ರಕ್ತಪಾತಕೆ ಬೆಚ್ಚಿದ
ರಾತ್ರಿಗಾಗಿ ಹಣತೆ ಬೆಳಗುವೆ
ದ್ವೇಷ ಕಲಹ ಕ್ರಾಂತಿಗಳಿಂದ ನರಳಿದ
ಧಾತ್ರಿಗಾಗಿ ಹಣತೆ ಬೆಳಗುವೆ

ತಲ್ಲಣ ಗೊಂಡಿದೆ ಮನುಕುಲ ಭೀಕರ
ಯುದ್ಧಗಳ ಸಿಡಿಲಿನಿಂದ
ಕವಿದ ಕರಾಳ ಮುಖವಾಡಗಳ ಕಳಚುವ
ಖಾತ್ರಿಗಾಗಿ ಹಣತೆ ಬೆಳಗುವೆ

ನಾನೆಂಬ ಅಹಂಕಾರದ ಕ್ರೂರ ವರ್ತುಲಗಳು
ಸುತ್ತಿವೆ ಜಗದಗಲ
ಕ್ಷುದ್ರರಲಿ ಅವಿತ ದುರುಳತನಗಳ ಮೆಟ್ಟುವ
ಕ್ಷಾತ್ರಿಗಾಗಿ ಹಣತೆ ಬೆಳಗುವೆ

ಭಯದ ನೆರಳುಗಳು ಆವರಿಸಿ ಹೆದರಿಸುತಿವೆ
ಹೆಜ್ಜೆ ಹೆಜ್ಜೆಗೆ ಅಲ್ಲವೇ



ಭ್ರಾತೃತ್ವದ ಸ್ನೇಹ ವಿಶ್ವಾಸಗಳು ಮೆರೆಯುವ
ಜಾತ್ರಿಗಾಗಿ ಹಣತೆ ಬೆಳಗುವೆ

ಒಳಗೊಳಗೆ ಉಸಿರುಗಳು ಮೌನವಾಗಿ
ಬಿಕ್ಕುತ್ತಿವೆ ಪ್ರತಿಷ್ಠೆಯ ಜಾಲಗಳಲಿ ಸಿಲುಕಿ
ಬೇಗಂ
ಶಾಂತಿ ಪ್ರೇಮಗಳನು ನೀಡುವ ದೂತನಾಗಿ
ಬರುವ ಯಾತ್ರಿಗಾಗಿ ಹಣತೆ ಬೆಳಗುವೆ



ಹಮೀದಾಬೇಗಂ
ದೇಸಾಯಿ.ಸಂಕೇಶ್ವರ.

# ಎಲ್ಲರೊಂದಿಗೆ ಉತ್ತಮ ಒಡನಾಟ ಹೊಂದಿದ ಪಂಚಾಯತಿ ನೌಕರ ರಮೇಶ ಅಕ್ಕಿ ಸೇವಾ ನಿವೃತ್ತಿ

# ಜನಗಳೊಂದಿಗೆ ಬೆರೆತು ನಡೆಯುವ ವ್ಯಕ್ತಿ ರಮೇಶ ಅಕ್ಕಿ: ರಾಮಣ್ಣ ಬಂಕದಮನಿ

ಅ.ಶ. ಸುದ್ದಿ ಕುಕನೂರು

**ಕುಕನೂರು: ಪಟ್ಟಣ ಪಂಚಾಯತಿ ನೌಕರ ರಮೇಶ್ ಅಕ್ಕಿಯವರು ಪಟ್ಟಣ ಪಂಚಾಯತಿಯಲ್ಲಿ ಕರ ವಸೂಲಿಗಾರರಾಗಿ 29 ವರ್ಷ ಸೇವೆ ಸಲ್ಲಿಸಿ ಮೇ 31ರ ಮಂಗಳವಾರದಂದು ಸೇವಾ ನಿವೃತ್ತಿ ಹೊಂದಿದರು. ಅವರಿಗೆ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು, ಅಧ್ಯಕ್ಷರು ಉಪಾಧ್ಯಕ್ಷರು, ಸ್ಥಾಯಿ ಸಮಿತಿಯ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಸೇವಾ ನಿವೃತ್ತಿ ಹೊಂದಿದ ರಮೇಶ್ ಅಕ್ಕಿ ಅವರಿಗೆ ಸನ್ಮಾನಿಸಿ ಗೌರವಿಸಿದರು.**

ಈ ವೇಳೆ ಪಟ್ಟಣ ಪಂಚಾಯತಿ ಸದಸ್ಯ ರಾಮಣ್ಣ ಬಂಕದಮನಿ ಮಾತನಾಡಿ ರಮೇಶ ಅಕ್ಕಿಯವರು 1997 ರಿಂದ ಕುಕುನೂರು ಗ್ರಾಮ ಪಂಚಾಯಿತಿ ಇದ್ದಾಗ 2015 ರವರೆಗೆ ದಿನಗೂಲಿ ನೌಕರರಾಗಿ ಸೇರಿ 2016 ರಿಂದ ಪಟ್ಟಣ ಪಂಚಾಯತಿ ಯಾಗಿ ಖಾಯಂ ನೌಕರರಾಗಿ ಕರ ವಸೂಲಿಗಾರರಾಗಿ 29 ವರ್ಷ ಸೇವೆ ಸಲ್ಲಿಸಿ ಮೇ 31ರ



ಮಂಗಳವಾರದಂದು ಸೇವಾ ನಿವೃತ್ತಿ ಹೊಂದಿದರು. ಅವರು ಆಗಿನ ಗ್ರಾಮ ಪಂಚಾಯತಿ ಇದ್ದಾಗ ಕಡಿಮೆ ಮೊತ್ತದಲ್ಲಿ ಕಾರ್ಯನಿರ್ವಹಿಸುವುದರೊಂದಿಗೆ ಕುಕನೂರು ಪಟ್ಟಣದ ಎಲ್ಲರ ಕಾರ್ಯಗಳನ್ನು ಅತ್ಯಂತ ಅಟ್ಚುಕಟ್ಟಾಗಿ ಎಲ್ಲಾ ಸದಸ್ಯರುಗಳನ್ನು ಸ್ನೇಹಜೀವಿಗಳಾಗಿ ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸಿ ಎಲ್ಲರೊಂದಿಗೆ ಅನ್ಯೂನ್ಯ ವ್ಯಕ್ತಿತ್ವ ಹೊಂದಿದಂತಹ ರಮೇಶ್ ಅಕ್ಕಿ ಅವರ ಸೇವಾ ನಿವೃತ್ತಿ ಸುಖಕರವಾಗಲಿ ಎಂದು ಶುಭ ಹಾರೈಸಿ ಸನ್ಮಾನಿಸಿದರು.

ನಂತರ ಪತ್ರಕರ್ತ ರುದ್ರಪ್ಪ ಭಂಡಾರಿ ಮಾತನಾಡಿ ರಮೇಶ್ ಅಕ್ಕಿ ಅವರು ಅತ್ಯಂತ ಮೃದು ಮುಗ್ಧ ಸ್ವಭಾವದ ವ್ಯಕ್ತಿ ಅವರು ಪ್ರತಿಯೊಂದು ಕಾರ್ಯಗಳನ್ನು ಯಾವುದೇ ಮೀನಾ ಮೇಷ ಇಲ್ಲದಂತೆ ಮುನ್ನುಗ್ಗಿ ಪಂಚಾಯತಿಯ ಧ್ವಜಾರೋಹಣ, ಮಹನೀಯರ ಜಯಂತೋತ್ಸವ ಹಾಗೂ ಪ್ರಭಾತ ಪೇರಿ ಸೇರಿದಂತೆ ಇನ್ನೂ ಅನೇಕ ಕಾರ್ಯಕ್ರಮಗಳಲ್ಲಿ ಮುಂದಾಳತ್ವ ವಹಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುತ್ತಿದ್ದರು. ಮತ್ತು ಪಂಚಾಯತಿಯ ಎಲ್ಲಾ ಸಿಬ್ಬಂದಿ, ಸದಸ್ಯರೊಂದಿಗೆ ಉತ್ತಮ ಬಾಂಧವ್ಯ ಒಡನಾಟಗಳನ್ನು ಹೊಂದಿದಂತಹ ವ್ಯಕ್ತಿಯಾಗಿದ್ದರು ಆದರೂ ಅವರ ಸೇವೆ ಇನ್ನೂ ಸ್ವಲ್ಪ ದಿನ ಇರಬೇಕಾಗಿತ್ತು ಅನಿವಾರ್ಯ ಸರ್ಕಾರದ ಆದೇಶದಂತೆ ಅವರ ಸೇವಾ ನಿವೃತ್ತಿ ಹೊಂದಿದ್ದಾರೆ ಅವರಿಗೆ ಗ್ರಾಮ ದೇವತೆಯ ಆಶೀರ್ವಾದ ಸದಾ ಕಾಲ ಇರಲಿ, ಅವರ ನಿವೃತ್ತಿ ಜೀವನ ಸುಖಮಯವಾಗಲಿ ಎಂದು ಹೇಳಿದರು.

ನಂತರ ಎನ್.ಕೆ ದೀಕ್ಷಿತ್ ಮಾತನಾಡಿ ರಮೇಶ ಅಕ್ಕಿ ತುಂಬಾ ಕಷ್ಟಕರ ಜೀವನದಲ್ಲಿ ಬಂದಂತ ವ್ಯಕ್ತಿಯಾಗಿದ್ದು ಅವರ ತಂದೆಯವರು ಅನಾರೋಗ್ಯದಿಂದ ಬಳಲುತ್ತಿದ್ದ ಸಂದರ್ಭದಲ್ಲಿ ಮನೆಯ ಪರಿಸ್ಥಿತಿ ತುಂಬಾ ಕಷ್ಟಕರ ಜೀವನವಾಗಿ-ತ್ತು ಅಂದಿನ ದಿನ ಮಾನಗಳಲ್ಲಿ ಅತಿ ಕಡಿಮೆ ಸಂಬಳಕ್ಕೆ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಾ ಪಂಚಾಯಿತಿಯ ಎಲ್ಲಾ ಸಿಬ್ಬಂದಿಯವರ ಹಾಗೂ ಸದಸ್ಯರುಗಳ ಎಲ್ಲರ ಅಚ್ಚುಮೆಚ್ಚಿಗೆಯ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದು ಇವರ ನಿವೃತ್ತಿ ಜೀವನ ಶ್ರೀ ಮಹಾಮಾಯ ದೇವಿಯ ಕೃಪೆ ಆಶೀರ್ವಾದದೊಂದಿಗೆ ಸುಖಮಯಕರವಾಗಲಿ ಎಂದು ಶುಭ ಹಾರೈಸಿದರು. ಈ ಸಂಧರ್ಭದಲ್ಲಿ ಪಟ್ಟಣ ಪಂಚಾಯತಿ ಅಧ್ಯಕ್ಷೆ ಲೀಲಾವತಿ ಮುಧೋಳ, ಸ್ಥಾಯಿ ಸಮಿತಿ ಅಧ್ಯಕ್ಷ ಸಿರಾಜುದ್ದಿನ್ ಕರಮುಡಿ, ಮುಖ್ಯಾಧಿಕಾರಿ ಎಂ. ನಾಗೇಶ, ಪಟ್ಟಣ ಪಂಚಾಯತಿ. ಸದ್ಯಸರು, ಸಿಬಂದಿ ವರ್ಗದವರು, ರಮೇಶ ಅಕ್ಕಿ ಕುಟುಂಸ್ಥರು ಇದ್ದರು.

## ತಕ್ಷಣವೇ ಇರಾನ್ ತೊರೆಯಲು ಭಾರತೀಯರಿಗೆ ಸೂಚನೆ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ಪಶ್ಚಿಮ ಏಷ್ಯಾದಲ್ಲಿ ಉದ್ಭವಿಸಿರುವ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಭಾರತ ಸರ್ಕಾರವು ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳಿಗೆ ತಕ್ಷಣವೇ ಆ ದೇಶವನ್ನು ತೊರೆಯುವಂತೆ ಸಲಹೆ ನೀಡಿದೆ. ಪ್ರಾಂತ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆ ಮತ್ತು ಸಂಘರ್ಷದ ಸಾಧ್ಯತೆಯನ್ನು ಪರಿಗಣಿಸಿ, ಭಾರತೀಯ ನಾಗರಿಕರು ಇರಾನ್‌ನಲ್ಲಿ ತಮ್ಮ ಸುರಕ್ಷತೆಯ ಬಗ್ಗೆ ಅತ್ಯಂತ ಜಾಗರೂಕರಾಗಿರಬೇಕೆಂದು ಮತ್ತು ಸಾಧ್ಯವಾದಷ್ಟು ಬೇಗ ದೇಶವನ್ನು ತೊರೆಯಬೇಕೆಂದು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸಲಹೆ ನೀಡಿದೆ.**



ಇರಾನ್‌ಗೆ ಅಗತ್ಯವಿಲ್ಲದ ಪ್ರಯಾಣವನ್ನು ಮಾಡದಂತೆಯೂ ಸರ್ಕಾರವು ಭಾರತೀಯರಿಗೆ ಸೂಚಿಸಿದೆ. ಇರಾನ್‌ನಲ್ಲಿರುವ ಭಾರತೀಯ ನಾಗ-ರಿಕರು ಅಲ್ಲಿನ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿರಲು ಮತ್ತು ಅಲ್ಲಿನ ಹೈ ಕಮಿಷನ್ ನೀಡುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಕೋರಲಾಗಿದೆ. ಪಶ್ಚಿಮ ಏಷ್ಯಾದಲ್ಲಿ ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ತೀವ್ರಗೊಂಡ ಹಿನ್ನೆಲೆಯಲ್ಲಿ, ಈ ಪ್ರದೇಶದಲ್ಲಿರುವ ಭಾರತೀಯರ ಸುರಕ್ಷತೆಗಾಗಿ ಭಾರತವು ಈ ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಂಡಿದೆ. ಪ್ರಸ್ತುತ ಇರಾನ್‌ನಲ್ಲಿರುವವರು ಲಭ್ಯವಿರುವ ಯಾವುದೇ ಮಾರ್ಗಗಳ ಮೂಲಕ ದೇಶವನ್ನು ತೊರೆಯುವಂತೆಯೂ ಅದು ಒತ್ತಾಯಿಸಿದೆ. ಈ ಪ್ರದೇಶದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು, ಇರಾನ್‌ಗೆ ಯಾವುದೇ ಪ್ರಯಾಣವನ್ನು ಮಾಡದಿರುವಂತೆ ಎಲ್ಲಾ ಭಾರತೀಯ ಪ್ರಜೆಗಳಿಗೆ ರಾಯಭಾರ ಕಚೇರಿಯು ತನ್ನ ಹಿಂದಿನ ಸಲಹೆಯನ್ನು ಪುನರುಚ್ಚರಿಸುತ್ತದೆ. ಪ್ರಸ್ತುತ ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳು ಲಭ್ಯವಿರುವ ಸಾರಿಗೆ ವಿಧಾನಗಳ ಮೂಲಕ ದೇಶವನ್ನು ತೊರೆಯಲು ಸೂಚಿಸಲಾಗಿದೆ ಎಂದು ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ. ಫೆಬ್ರವರಿ 28 ರಂದು ಇರಾನ್ ಮೇಲೆ ಅಮೆರಿಕ-ಇಸ್ರೇಲ್ ದಾಳಿಯಿಂದಾಗಿ ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಾದ ನಂತರ, ಭಾರತವು ನಾಗರಿಕರು ಪ್ರಯಾಣವನ್ನು ತಪ್ಪಿಸಿ ಸಾಧ್ಯವಾದಷ್ಟು ಬೇಗ ದೇಶವನ್ನು ತೊರೆಯುವಂತೆ ಒತ್ತಾಯಿಸಿ ಹಲವಾರು ಸಲಹೆಗಳನ್ನು ನೀಡಿತ್ತು. ಯುದ್ಧ ಪ್ರಾರಂಭವಾದಾಗಿನಿಂದ 1,800 ಕ್ಕೂ ಹೆಚ್ಚು ಭಾರತೀಯ ಪ್ರಜೆಗಳನ್ನು ದೇಶದಿಂದ ಸ್ಥಳಾಂತರಿಸಲಾಗಿತ್ತು. ಫೆಬ್ರವರಿ 28 ರಿಂದ ಪಶ್ಚಿಮ ಏಷ್ಯಾದಿಂದ ಸುಮಾರು 6.49 ಲಕ್ಷ ಪ್ರಯಾಣಿಕರು ಭಾರತಕ್ಕೆ ಮರಳಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಏಪ್ರಿಲ್‌ನಲ್ಲಿ ತಿಳಿಸಿದ್ದು, ಕೊಲ್ಲಿ ಮತ್ತು ಪಶ್ಚಿಮ ಏಷ್ಯಾ ಪ್ರದೇಶದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಮತ್ತು ಅಲ್ಲಿ ವಾಸಿಸುವ ಬಹುಸಂಖ್ಯೆಯ ಭಾರತೀಯ ಸಮುದಾಯದ ಸುರಕ್ಷತೆ, ಭದ್ರತೆ ಮತ್ತು ಕಲ್ಯಾಣಕ್ಕೆ ಆದ-್ಯತೆ ನೀಡುತ್ತಿದೆ ಎಂದು ಹೇಳಿದೆ. ಬೈರುತ್‌ನ ದಕ್ಷಿಣ ಉಪನಗರಗಳ ಮೇಲೆ ಇಸ್ರೇಲ್ ನಡೆಸಿದ ದಾಳಿಗೆ ಪ್ರತೀಕಾರವಾಗಿ ಇರಾನ್ ಇಸ್ರೇಲ್ ಗುರಿಗಳ ಮೇಲೆ ಕ್ಷಿಪಣಿಗಳನ್ನು ಹಾರಿಸಿದ ನಂತರ ಇಂದು ಉದ್ವಿಗ್ನತೆ ತೀವ್ರವಾಗಿ ಹೆಚ್ಚಾಯಿತು. ಯುದ್ಧವನ್ನು ಕೊನೆಗೊಳಿಸಲು ಒಪ್ಪಂದಕ್ಕೆ ಅವಕಾಶ ನೀಡಲು ಲೆಬನಾನ್‌ನಲ್ಲಿ ದಾಳಿಗಳನ್ನು ನಿಲ್ಲಿಸುವಂತೆ ಟ್ರಂಪ್ ಇಸ್ರೇಲ್‌ಗೆ ನಿರ್ದೇಶನ ನೀಡಿದ್ದರೂ ಸಹ ಪ್ರತೀಕಾರವಾಗಿ ಇಸ್ರೇಲ್ ಕ್ಷಿಪಣಿ ದಾಳಿ ನಡೆಸಿ, ಇರಾನ್‌ನಲ್ಲಿ 20 ಸ್ಥಳಗಳ ಮೇಲೆ ದಾಳಿ ನಡೆಸಿದೆ. ಇರಾನ್ ಬೆಂಬಲಿತ ಹೌತಿಗಳ ನೆಲೆಯಾದ ಯೆಮೆನ್‌ನಿಂದ ಬಂದ ಕ್ಷಿಪಣಿಯನ್ನು ತಡೆಹಿಡಿದಿರುವುದಾಗಿ ಇಸ್ರೇಲ್ ಹೇಳಿದೆ. ಇರಾನ್‌ನ ಮಶಹರ್‌ನಲ್ಲಿರುವ ಪೆಟ್ರೋಕೆಮಿಕಲ್ ಸೌಲಭ್ಯದ ಮೇಲೆಯೂ ಇಸ್ರೇಲ್ ದಾಳಿ ನಡೆಸಿ ಭಾಗಶಃ ಹಾನಿಯನ್ನುಂಟುಮಾಡಿದೆ.

## ನಾಡಸೇನಾನಿ ಟಿ.ಎ. ನಾರಾಯಣಗೌಡರ 60ನೇ ಜನ್ಮದಿನ: ಜಿಲ್ಲಾದ್ಯಂತ ಸಮಾಜಮುಖಿ ಕಾರ್ಯಕ್ರಮಗಳ ಸಂಭ್ರಮ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕನ್ನಡದ ಭೀಷ್ಮ, ನಾಡಸೇನಾನಿ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರಾದ ಟಿ.ಎ. ನಾರಾಯಣಗೌಡರ 60ನೇ ವರ್ಷದ ಜನ್ಮದಿನದ ಅಂಗವಾಗಿ ಜೂನ್ 10ರಂದು ಜಿಲ್ಲೆಯಾದ್ಯಂತ ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಬಿ. ಗಿರೀಶಾನಂದ ಜ್ಞಾನಸುಂದರ ತಿಳಿಸಿದ್ದಾರೆ.**

ರಾಜ್ಯಾಧ್ಯಕ್ಷರ ಜನ್ಮದಿನವನ್ನು ಕೇವಲ ಸಂಭ್ರಮಾಚರಣೆಗೆ ಸೀಮಿತಗೊಳಿಸದೇ, ಸಮಾಜ ಸೇವೆಯ ಮೂಲಕ ಅರ್ಥ-ಪೂರ್ಣವಾಗಿ ಆಚರಿಸಲು ಜಿಲ್ಲೆಯ ಎಲ್ಲ ತಾಲೂಕು ಘಟಕಗಳು ಮುಂದಾಗಿವೆ. ಶಿಕ್ಷಣ, ಪರಿಸರ ಸಂರಕ್ಷಣೆ, ಆರೋಗ್ಯ ಸೇವೆ ಹಾಗೂ ಮಾನವೀಯ ಮೌಲ್ಯಗಳ ಉತ್ತೇಜನಕ್ಕೆ ಒತ್ತು ನೀಡುವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಕೊಪ್ಪಳ ತಾಲೂಕು ಘಟಕದ ಅಧ್ಯಕ್ಷರಾದ ಹುಸೇನ್ ಬಾಷಾ ಮಣ್ಣೂರ್ ಅವರ ನೇತೃತ್ವದಲ್ಲಿ ವೃದ್ಧಾಶ್ರಮದಲ್ಲಿರುವ ಹಿರಿಯ ನಾಗರಿಕರಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಮಾಜಕ್ಕೆ ತಮ್ಮ ಜೀವನವನ್ನೇ ಸಮರ್ಪಿಸಿರುವ ವಯೋವೃದ್ಧರೊಂದಿಗೆ




ಜನ್ಮದಿನದ ಸಂಭ್ರಮವನ್ನು ಹಂಚಿಕೊಳ್ಳುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗಂಗಾವತಿ ತಾಲೂಕು ಅಧ್ಯಕ್ಷರಾದ ಮಲ್ಲಿಕಾರ್ಜುನ ಗಿಣಿಮೋತಿ ಅವರ ನೇತೃತ್ವದಲ್ಲಿ ಸರ್ಕಾರಿ ಶಾಲಾ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಹಾಗೂ ವೃದ್ಧಾಶ್ರಮದಲ್ಲಿ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದ್ದು, ಪರಿಸರ ಸಂರಕ್ಷಣೆ ಮತ್ತು ಸೇವಾ ಮನೋಭಾವದ ಸಂದೇಶವನ್ನು ಸಾರಲಿದೆ. ಕುಷ್ಟಗಿ ತಾಲೂಕು ಅಧ್ಯಕ್ಷರಾದ ಪ್ರಕಾಶ ಮನ್ನೆರಾಳ ಅವರ ನೇತೃತ್ವದಲ್ಲಿ ಸರ್ಕಾರಿ ಶಾಲೆಗಳಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಮೂಡಿಸುವ ಉದ್ದೇಶ ಹೊಂದಿದೆ. ಯಲಬುರ್ಗಾ ತಾಲೂಕು ಅಧ್ಯಕ್ಷರಾದ ಕಲ್ಲಯ್ಯ ಹಿರೇಮಠ್ ಅವರ ನೇತೃತ್ವದಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಪೆನ್ನು ವಿತರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು ನೀಡುವ ಮೂಲಕ ಶಿಕ್ಷಣಕ್ಕೆ ಉತ್ತೇಜನ ನೀಡಲಾಗುತ್ತಿದೆ.

ಕುಕನೂರು ತಾಲೂಕು ಅಧ್ಯಕ್ಷರಾದ ರಮೇಶ್ ಚಂಡೂರು ಅವರ ನೇತೃತ್ವದಲ್ಲಿ ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಣ್ಣು-ಹಂಪಲು ವಿತರಣೆ ಕಾರ್ಯಕ್ರಮ ನಡೆಯಲಿದ್ದು, ರೋಗಿಗಳ ಆರೋಗ್ಯ ಸುಧಾರಣೆಗೆ ಪ್ರೋತ್ಸಾಹ ನೀಡುವ ಜೊತೆಗೆ ಮಾನವೀಯ ಕಾಳ-ಜಿಯನ್ನು ವ್ಯಕ್ತಪಡಿಸುವ ಕಾರ್ಯ ಇದಾಗಿದೆ. ಕನಕಗಿರಿ ತಾಲೂಕು ಅಧ್ಯಕ್ಷರಾದ ಹರೀಶ ಪೂಜಾರ್ ಅವರ ನೇತೃತ್ವದಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಪೆನ್ನು ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ನೆರವಾಗುವ ಉದ್ದೇಶ ಹೊಂದಿದೆ.

ಇದರೊಂದಿಗೆ ಜಿಲ್ಲೆಯ ವಿವಿಧ ಹೋಬಳಿ ಹಾಗೂ ಗ್ರಾಮ ಮಟ್ಟದಲ್ಲಿಯೂ ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ರಕ್ತದಾನ ಶಿಬಿರ, ಸಸಿ ನೆಡುವಿಕೆ, ಅನ್ನಸಂತರ್ಪಣೆ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿ ವಿತರಣೆ ಸೇರಿದಂತೆ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ರಾಜ್ಯಾಧ್ಯಕ್ಷರ ಜನ್ಮದಿನವನ್ನು ವಿಶಿಷ್ಟವಾಗಿ ಆಚರಿಸಲಿದ್ದಾರೆ.

ಟಿ.ಎ. ನಾರಾಯಣಗೌಡರ ಕನ್ನಡಪರ ಹೋರಾಟ, ನಾಡು-ನುಡಿ ಉಳಿವಿಗಾಗಿ ನಡೆಸಿರುವ ನಿರಂತರ ಸೇವೆ ಹಾಗೂ ಸಮಾಜಮುಖಿ ಚಟುವಟಿ-ಕೆಗಳಿಂದ ಪ್ರೇರಿತರಾಗಿ ಕಾರ್ಯಕರ್ತರು ಈ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ. ಜಿಲ್ಲೆಯಾದ್ಯಂತ ಸಾವಿರಾರು ಕರವೇ ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆ ಇದ್ದು, ಜನ್ಮದಿನಾಚರಣೆಯು ಸೇವಾ ಸಂಭ್ರಮವಾಗಿ ರೂಪುಗೊಳ್ಳಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದವನ ಪ್ರಾಣ ಉಳಿಸಿದ ಕೃತಕಬುದ್ಧಿಮತ್ತೆ (AI)




ಅ.ಶ. ಸುದ್ದಿ ಮೀರತ್

**ಮೀರತ್: ಮನುಕುಲಕ್ಕೆ ಮಾರಕವಾಗಲಿದೆ ಎಂದೇ ಬಿಂಬಿಸಲಾಗುತ್ತಿರುವ ಕೃತಕ ಬುದ್ಧಿಮತ್ತೆ ಒಬ್ಬ ಮನುಷ್ಯನ ಪ್ರಾಣ ಉಳಿಸುವಲ್ಲಿಯೂ ಯಶಸ್ವಿಯಾಗಿದೆ. ಹೇಗೆ ಅಂತೀರಾ ಹಾಗಾದರೆ ಈ ವರದಿ ನೋಡಿ.. ಮೀರತ್‌ನ ಸರ್ಧಾನಾ ಪ್ರದೇಶದ ನಿವಾಸಿ ಯುವಕ ಜೂ. 7 ರಂದು ಇನ್‌ಸ್ಟಾಗ್ರಾಮ್‌ನಲ್ಲಿ ಬಿಳಿ ಬಣ್ಣದ ದ್ರವವನ್ನು ಸೇವಿಸುತ್ತಿರುವಂತೆ ಕಾಣುವ ವೀಡಿಯೊವನ್ನು ಪೋಸ್ಟ್ ಮಾಡಿದ್ದಾನೆ. ವೀಡಿಯೊದಲ್ಲಿ ಅಬ್ ತುಮ್ ಖುಷ್ ರೆಹ್ನಾ ಅಪ್ನಿ ಲೈಫ್ ಮೇ (ಈಗ ನೀವು ನಿಮ್ಮ ಜೀವನದಲ್ಲಿ ಸಂತೋಷವಾಗಿರಿ) ಎಂಬ ಸಂದೇಶವಿತ್ತು.**

ಎಐ ಆಧಾರಿತ ಮೆಟಾ ಆತನ ಪೋಸ್ಟ್‌ಗೆ ಸಂಬಂಧಿಸಿದಂತೆ ಸಂಜೆ 6.53 ಕ್ಕೆ ಪೊಲೀಸ್ ಪ್ರಧಾನ ಕಚೇರಿಯಲ್ಲಿರುವ ಸಾಮಾಜಿಕ ಮಾಧ್ಯಮ ಕೇಂದ್ರಕ್ಕೆ ಆತ್ಮಹತ್ಯೆ ಎಚ್ಚರಿಕೆಯನ್ನು ಕಳುಹಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸ್ ಮಹಾನಿರ್ದೇಶಕರ ನಿರ್ದೇಶನದ ಮೇರೆಗೆ ಕೇಂದ್ರವು ತಕ್ಷಣವೇ ಲಭ್ಯವಿರುವ ಮೊಬೈಲ್ ಸಂಖ್ಯೆ ಮತ್ತು ಸ್ಥಳ ವಿವರಗಳನ್ನು ಆಧರಿಸಿ ಮೀರತ್ ಪೊಲೀಸರಿಗೆ ಮಾಹಿತಿ ನೀಡಿದೆ.ಸರ್ಧಾನದ ಹಿರಿಯ ಪೊಲೀಸ್ ವ-ರಿಷ್ಠಾಧಿಕಾರಿಯವರ ಮೇಲ್ವಿಚಾರಣೆಯಲ್ಲಿ ಯುವಕನ ನಿವಾಸಕ್ಕೆ ತೆರಳಿ ನೋಡಿದಾಗ ಆತನ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆತನ ಬಳಿ ಶಂಕಿತ ದ್ರವ ಪದಾರ್ಥ-ವಿರುವ ಬಾಟಲಿಯೂ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಟುಂಬ ಸದಸ್ಯರ ಸಹಾಯದಿಂದ ಪೊಲೀಸ್ ಸಿಬ್ಬಂದಿ ಆತನನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ದರು, ಅಲ್ಲಿ ಚಿಕಿತ್ಸೆಯ ನಂತರ ಆತನ ಸ್ಥಿತಿ ಸುಧಾರಿಸಿತು.ವಿಚಾರಣೆಯ ಸಮಯದಲ್ಲಿ, ಸಂಬಂಧ ಮುರಿದುಬಿದ್ದ ನಂತರ ಯುವಕ ಒತ್ತಡ ಮತ್ತು ಖಿನ್ನತೆಗೆ ಒಳಗಾಗಿದ್ದಾನೆ ಎಂದು ಹೇಳಿದ್ದಾನೆ, ಇದು ಆತನನ್ನು ತೀವ್ರ ಹೆಜ್ಜೆ ಇಡಲು ಕಾರಣವಾಯಿತು. 2022 ರಿಂದ ಕಾರ್ಯನಿರ್ವಹಿಸುತ್ತಿರುವ ಮೆಟಾ ಜೊತೆಗಿನ ಸಮನ್ವಯ ಕಾರ್ಯವಿಧಾನದ ಅಡಿಯಲ್ಲಿ, ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಮ್‌ನಲ್ಲಿ ಆತ್ಮಹತ್ಯೆಗೆ ಸಂಬಂಧಿಸಿದ ಪೋಸ್ಟ್‌ಗಳ ಕುರಿತು ಮಾಹಿತಿಯನ್ನು ತಕ್ಷಣದ ಹಸ್ತಕ್ಷೇಪಕ್ಕಾಗಿ ಪೊಲೀಸರೊಂದಿಗೆ ಹಂಚಿಕೊಳ್ಳಲಾಗಿದೆ ಎಂದು ಉತ್ತರ ಪ್ರದೇಶ ಪೊಲೀಸರು ತಿಳಿಸಿದ್ದಾರೆ.

## ಅನಿಯಮಿತ ವಿದ್ಯುತ್ ಕಡಿತಕ್ಕೆ ಸಾರ್ವಜನಿಕರ ಆಕ್ರೋಶ : ತುರ್ತು ಕ್ರಮಕ್ಕೆ ಕುಕನೂರು ಪಟ್ಟಣ ಹಿತರಕ್ಷಣಾ ಸಮಿತಿ ಆಗ್ರಹ

ಅ.ಶ. ಸುದ್ದಿ ಕುಕನೂರು

**ಕುಕನೂರು: ಕಳೆದ ಒಂದು ತಿಂಗಳಿನಿಂದ ಕುಕನೂರು ಪಟ್ಟಣದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಅತ್ಯಂತ ಅನಿಯಮಿತವಾಗಿ ವಿದ್ಯುತ್ ಕಡಿತಗೊಳಿಸಲಾಗುತ್ತಿದ್ದು, ಇದರಿಂದ ಸಾರ್ವಜನಿಕರು, ವ್ಯಾಪಾರಸ್ಥರು ಹಾಗೂ ವಿದ್ಯಾರ್ಥಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನೆಲೆಯಲ್ಲಿ ಕುಕನೂರು ಪಟ್ಟಣ ಹಿತರಕ್ಷಣಾ ಸಮಿತಿಯು ಜೆಸ್ಕಾಮ್ (GESCOM) ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ (AEE) ಅಧಿಕೃತ ಮನವಿ ಪತ್ರ ಸಲ್ಲಿಸಿ, ಸಮಸ್ಯೆಯನ್ನು ತಕ್ಷಣವೇ ಬಗೆಹರಿಸುವಂತೆ ಒತ್ತಾಯಿಸಿದರು.**

ನಿರಂತರವಾಗಿ ದಿನದಲ್ಲಿ ಹತ್ತಾರು ಬಾರಿ ವಿದ್ಯುತ್ ಕೈಕೊಡುತ್ತಿರುವುದರಿಂದ ಪಟ್ಟಣದ ವಿವಿಧ ಕ್ಷೇತ್ರಗಳ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಸಮಿತಿಯು ಈ ಕೆಳಗಿನ ಪ್ರಮುಖ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದಿದೆ. **ಸಮಸ್ಯೆಗಳು:** ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅಡಚಣೆ: ರಾತ್ರಿ ವೇಳೆಯಲ್ಲಿ ಪದೇ ಪದೇ ವಿದ್ಯುತ್ ಕಡಿತಗೊಳ್ಳುತ್ತಿರುವುದರಿಂದ ವಿದ್ಯಾರ್ಥಿಗಳ ಓದಿಗೆ ತೀವ್ರ ತೊಂದರೆಯಾಗುತ್ತಿದೆ.



ಸ್ಥಳೀಯ ಉದ್ಯಮ ಹಾಗೂ ವ್ಯಾಪಾರಕ್ಕೆ **ನಷ್ಟ:** ಪಟ್ಟಣದ ಸಣ್ಣ ಕೈಗಾರಿಕೆಗಳು, ಗಿರಣಿಗಳು, ಕಂಪ್ಯೂಟರ್ ಸೆಂಟರ್‌ಗಳು ಹಾಗೂ ದಿನಸಿ ವ್ಯಾಪಾರಸ್ಥರು ವಿದ್ಯುತ್ ಇಲ್ಲದೆ ದೈನಂದಿನ ಕಾರ್ಯ ನಿರ್ವಹಿಸಲಾಗದೆ ಭಾರಿ ಆರ್ಥಿಕ ನಷ್ಟ ಅನುಭವಿಸುತ್ತಿದ್ದಾರೆ, ಕುಡಿಯುವ ನೀರಿನ ಸಮಸ್ಯೆ: ನಿಗದಿತ ಸಮಯಕ್ಕೆ ವಿದ್ಯುತ್ ಸಿಗದೆ ಇರುವುದರಿಂದ ಪುರಸಭೆಯ ನೀರು ಸರಬರಾಜು ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಸಾರ್ವಜನಿಕ ಸುರಕ್ಷತೆಗೆ **ಧಕ್ಕೆ:** ರಾತ್ರಿಯಿಡೀ ಕತ್ತಲೆ ಆವರಿಸುವುದರಿಂದ ಸಾರ್ವಜನಿಕರ ಸಂಚಾರಕ್ಕೆ ಭಯದ ವಾತಾವರಣ ನಿರ್ಮಾಣವಾಗಿದ್ದು, ಕಳ್ಳತನದಂತಹ ಅಹಿತಕರ ಘಟನೆಗಳು ನಡೆಯುವ ಆತಂಕ ಎದುರಾಗಿದೆ.

**ಸಮಿತಿಯ ಆಗ್ರಹ.**

"ಪಟ್ಟಣದ ಈ ಎಲ್ಲಾ ಗಂಭೀರ ಸಮಸ್ಯೆಗಳನ್ನು ಜೆಸ್ಕಾಮ್ ಅಧಿಕಾರಿಗಳು ವೈಯಕ್ತಿಕ ಗಮನಹರಿಸಿ, ವಿದ್ಯುತ್ ಮಾರ್ಗಗಳಲ್ಲಿನ ತಾಂತ್ರಿಕ ದೋಷಗಳನ್ನು ತಕ್ಷಣವೇ ಸರಿಪಡಿಸಬೇಕು. ಮುಂಬರುವ ದಿನಗಳಲ್ಲಿ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಬೇಕು. ಒಂದು ವೇಳೆ ಲೋಡ್ ಶೆಡ್ಡಿಂಗ್ ಅನಿವಾರ್ಯವಿದ್ದಲ್ಲಿ, ಸಾರ್ವಜನಿಕರಿಗೆ ಮುಂಚಿತವಾಗಿ ನಿಗದಿತ ವೇಳಾಪಟ್ಟಿಯನ್ನು ಪ್ರಕಟಿಸಬೇಕು" ಎಂದು ಸಮಿತಿಯ ಸಂಚಾಲಕರಾದ ರವಿ ಜಕ್ಕಾ ಹಾಗೂ ಸಹ-ಸಂಚಾಲಕರಾದ ಮಂಜುನಾಥ ನಾಡಗೌಡ ಆಗ್ರಹಿಸಿದ್ದಾರೆ. ತಕ್ಷಣವೇ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಸಾರ್ವಜನಿಕರೊಂದಿಗೆ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸಮಿತಿಯ ಸದಸ್ಯರು ಎಚ್ಚರಿಸಿದರು. ಈ ಸಂಧರ್ಭದಲ್ಲಿ ಸಮಿತಿಯ ಅಂದಪ್ಪ ಜವಳಿ, ಕಳಕೇಶ ಹತ್ತಿಕಟಗಿ, ನೀಲಕಂಠಪ್ಪ ಬಣ್ಣದಬಾವಿ ಸೇರಿದಂತೆ ಸದಸ್ಯರು ಉಪಸ್ಥಿತರಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka